# ಅಪೊಸ್ತಲನಾದ ಪೌಲನು ಫಿಲಿಪ್ಪಿಯವರಿಗೆ ಬರೆದ ಪತ್ರಿಕೆ

**ಗ್ರಂಥಕರ್ತ:**

ಕರ್ತನಾದ ಯೇಸು ಕ್ರಿಸ್ತನ ಅಪೊಸ್ತಲನಾದ ಪೌಲನು.

**ದಿನಾಂಕ:**

ಕ್ರಿ.ಶ. 60ರ ಸಮಯದಲ್ಲಿ.

**ಧ್ಯೇಯ:**

ಪೌಲನು ತನ್ನ ಎರಡನೆಯ ಸುವಾರ್ತಾ ಪ್ರಯಾಣದ ಸಮಯದಲ್ಲಿ (ಅಪೊ 16:12-40) ಈ ಸಭೆಯನ್ನು ಸ್ಥಾಪಿಸಿದ್ದನು. ಈಗ ಅವನು ಸುವಾರ್ತೆ ಸಾರಿದ್ದರ ನಿಮಿತ್ತ ಹಿಂಸೆಗೆ ಒಳಗಾಗಿ, ಸೆರೆಮನೆಯಲ್ಲಿದ್ದಾನೆ. ಆದರೂ ಈ ಪತ್ರಿಕೆಯ ಪ್ರಮುಖ ಪದ "ಆನಂದ" ಮತ್ತು "ಸಂತೋಷವಾಗಿವೆ". ಪೌಲನು ಅನೇಕ ಕಷ್ಟಗಳು ಮತ್ತು ಅಪಾಯಗಳನ್ನು ಎದುರಿಸಿದರೂ ನಿರಾಸೆಗೆ ಒಳಗಾಗಲಿಲ್ಲ ಮತ್ತು ಯಾವುದರ ವಿಷಯದಲ್ಲಿಯೂ ಆರೋಪಗಳನ್ನು ಮಾಡಲಿಲ್ಲ. ಅವನು ಸಂತೋಷಿಸುತ್ತಾ ಇದ್ದನು ಮತ್ತು ಸಂತೋಷದಿಂದಿರುವಂತೆ ಇತರರನ್ನೂ ಪ್ರೋತ್ಸಾಹಪಡಿಸಿದನು. ಈ ಪತ್ರಿಕೆಯ ಮತ್ತೊಂದು ಧ್ಯೇಯ ಸುವಾರ್ತೆ ಸಾರುವದು ಮತ್ತು ಪ್ರಚುರಪಡಿಸುವದು (1:4,7,12,18,27; 2:15,22). ಯೇಸು ಕ್ರಿಸ್ತನ ಸುವಾರ್ತೆಯ ನಿಮಿತ್ತ ಪೌಲನು ತನ್ನ ಸ್ವಂತ ಗುರಿಗಳು ಮತ್ತು ಬಯಕೆಗಳನ್ನು ತಿರಸ್ಕರಿಸಿದನು ಹಾಗೂ ಸುವಾರ್ತೆಯನ್ನು ಸಾರುವ ನಿಮಿತ್ತ ತಾಳ್ಮೆಯಿಂದ ಎಲ್ಲಾ ಕಾರ್ಯಗಳನ್ನು ಸಹಿಸಿಕೊಂಡನು. ಅವನು ತನ್ನ ಸಂತೋಷ, ಸಹಿಸಿಕೊಳ್ಳುವ ಸಾಮರ್ಥ್ಯ, ತನ್ನ ನೀತಿ, ತನ್ನ ಬಲ ಮತ್ತು ಶಕ್ತಿ ಯೇಸು ಕ್ರಿಸ್ತನಲ್ಲಿ ಮಾತ್ರವೇ ಎಂಬದನ್ನು ತಿಳಿದುಕೊಂಡನು ಮತ್ತು ಫಿಲಿಪ್ಪಿಯಲ್ಲಿರುವ ವಿಶ್ವಾಸಿಗಳಿಗೆ (ಮತ್ತು ನಮಗೆ) ತೃಪ್ತಿದಾಯಕ ಹಾಗೂ ಫಲದಾಯಕವಾಗಿರುವ ಜೀವನದ ಮಾರ್ಗ ಹಾಗೂ ಯೇಸು ಕ್ರಿಸ್ತನಿಗೆ ಪ್ರಭಾವವನ್ನು ತರುವ ಜೀವನದ ಮಾರ್ಗವನ್ನು ಪ್ರಕಟಪಡಿಸಿದ್ದಾನೆ. ಪರಿತ್ಯಾಗ ಮತ್ತೊಂದು ಪ್ರಾಮುಖ್ಯವಾದ ಧ್ಯೇಯವಾಗಿದೆ – 2:5-8; 3:8-10.

**1**
1

**1:1** *"ತಿಮೊಥೆ"*– ಅಪೊ 16:1. ತಿಮೊಥೆಯನು ಈ ಪತ್ರಿಕೆಯ ವಿಷಯಗಳನ್ನು ಬರೆಯಲು ಪೌಲನಿಗೆ ಸಹಾಯ ಮಾಡಿದ್ದಾನೆ ಎಂಬದಾಗಿ ನಾವು ಯೋಚಿಸುವ ಅವಶ್ಯಕತೆಯಿಲ್ಲ. ಆದರೆ ಪೌಲನು ಹೇಳುವ ಮಾತುಗಳನ್ನು ಕೇಳಿ ಅವನು ಬರೆದಿರಬಹುದು. ರೋಮಾ 16:22 ರೊಂದಿಗೆ ಹೋಲಿಸಿ ನೋಡಿರಿ.

*"ದಾಸರು"*– ರೋಮಾ 1:1.

*"ದೇವಜನರು"*– ರೋಮಾ 1:7.

*"ಫಿಲಿಪ್ಪಿ"*– ಅಪೊ 16:12-40.

*"ಸಭಾಧ್ಯಕ್ಷರು"*– ಅಪೊ 20:28; 1 ತಿಮೊ 3:3; 1 ಪೇತ್ರ 5:2. **2-3**

- **1:2-3** ರೋಮಾ 1:7-8. **4**

**1:4** *"ಬೇಡಿಕೊಳ್ಳುವ ಎಲ್ಲಾ ಸಮಯಗಳಲ್ಲಿಯೂ"*– ರೋಮಾ 1:10.

*"ಸಂತೋಷ"*– ಕೆಲವು ಸಭೆಗಳು ಕೆಲವೊಂದು ಸಮಯಗಳಲ್ಲಿ ಪೌಲನಿಗೆ ದುಃಖದ ಕಾರಣವಾಗಿದ್ದವು. 1 ಕೊರಿಂಥ ಅಥವಾ ಗಲಾತ್ಯರಲ್ಲಿ ಈ ಸಂತೋಷವಿತ್ತು ಎಂಬದಾಗಿ ಬರೆಯಲಾಗಿಲ್ಲ. ಫಿಲಿಪ್ಪಿಯಲ್ಲಿದ್ದ ಸಭೆಯು ಆ ಸಭೆಗಳಿಗಿಂತ ಭಿನ್ನವಾಗಿತ್ತು. ಸಂತೋಷ ಎಂಬದು ಫಿಲಿಪ್ಪಿ ಪತ್ರಿಕೆಯ ಮುಖ್ಯ ಪದವಾಗಿದೆ – ಪೌಲನು ಬರೆದಿರುವ ಇತರೆ ಪತ್ರಿಕೆಗಳಿಂತ ಈ ಚಿಕ್ಕ ಪತ್ರಿಕೆಯಲ್ಲಿ ಹೆಚ್ಚು ಸಲ ಇದನ್ನು ಬರೆದಿದ್ದಾನೆ – 1:18,25,26; 2:2,17,18,28; 3:1; 4:1,4,10. **5**

**1:5** ಪೌಲನ ಸಂತೋಷ ಮತ್ತು ಕೃತಜ್ಞತೆ ಸಲ್ಲಿಸುವಿಕೆಗೆ ಕಾರಣ ಇಲ್ಲಿ ಕೊಡಲಾಗಿದೆ – ಅವರು ಅನುಭವಿಸುತ್ತಿದ್ದ ಅನ್ಯೋನ್ಯತೆ ಮತ್ತು ಪರಸ್ಪರ ಸಹಾಯಕತೆಯಲ್ಲಿ ಯಾವುದೇ ಮುರಿಯಲ್ಪಡುವಿಕೆ ಇರಲಿಲ್ಲ – 4:14-16. ಯೇಸು ಕ್ರಿಸ್ತನ ಸುವಾರ್ತೆಯು ಅವರನ್ನು ಮನಸ್ಸು, ಹೃದಯ ಹಾಗೂ ಕ್ರಿಯೆಗಳಲ್ಲಿ ಐಕ್ಯಗೊಳಿಸಿತ್ತು.

*"ಸುವಾರ್ತೆ"*– ಪೌಲನು 1 ಕೊರಿಂಥ 15:1-8 ರಲ್ಲಿ ಸುವಾರ್ತೆಯನ್ನು ವಿವರಿಸಿದ್ದಾನೆ. ರೋಮಾಪುರದವರಿಗೆ ಬರೆಯಲಾಗಿರುವ ಇಡೀ ಪತ್ರಿಕೆಯು ಇದರ ಪೂರ್ಣ ವಿವರಣೆಯನ್ನು ಕೊಡುತ್ತದೆ. **6**

**1:6** *"ಭರವಸೆ"*– 2 ಕೊರಿಂಥ 1:14-15; ಗಲಾ 5:10; 1 ಥೆಸ 1:4-5; ಇಬ್ರಿ 6:9-10.

*“ನಿಮ್ಮನ್ನು ಪ್ರಾರಂಭಿಸಿದಾತನು”*– ದೇವರು. ಈ ವಾಕ್ಯದಿಂದ ಕೆಳಗಿರುವ ವಿಷಯಗಳನ್ನು ತಿಳಿದುಕೊಳ್ಳೋಣ: ನಿಜವಾದ ಕ್ರೈಸ್ತರು ದೇವರ ಕೆಲಸವಾಗಿದ್ದಾರೆ – ಎಫೆ 2:10; 2 ಕೊರಿಂಥ 5:17. ಆತನೇ ಅವರೊಳಗೆ ರಕ್ಷಣೆಯ ಕಾರ್ಯವನ್ನು ಪ್ರಾರಂಭಿಸಿದವನು (ಯಾಕೋಬ 1:8; ಯೋಹಾನ 3:5-8; 6:37,44), ಮತ್ತು ಆತನೇ ಆ ಕೆಲಸವನ್ನು ನಡೆಸುವವನಾಗಿದ್ದಾನೆ – 2:13; 1 ಕೊರಿಂಥ 12:6; ಕೊಲೊ 1:29; ಇಬ್ರಿ 13:21. ಇದು “ಒಳ್ಳೆಯ” ಕೆಲಸವಾಗಿದೆ. ಇದು (“ನಿಮ್ಮೊಳಗಿನ”) ಆಂತರ್ಯದ ಕಾರ್ಯವಾಗಿದೆ, ಹೃದಯ, ಮನಸ್ಸು, ಆಂತರ್ಯದೊಳಗಿನ ಕಾರ್ಯವಾಗಿದೆ – 2:13; ಗಲಾ 2:20; ಎಫೆ 3:16,20. ದೇವರು ಈ ಕೆಲಸವನ್ನು ಮುಗಿಸುತ್ತಾನೆ – ರೋಮಾ 8:29-30. ಮಾನವರು ಕೆಲಸವನ್ನು ಪ್ರಾರಂಭಿಸುವರು ಮತ್ತು ಒಂದು ಅಥವಾ ಇನ್ನೊಂದು ಕಾರಣದಿಂದ ಅದನ್ನು ಮುಗಿಸದೆ ಬಿಡುವರು. ದೇವರು ಹಾಗೆ ಮಾಡುವದಿಲ್ಲ. ಆತನು ರಕ್ಷಣೆಯ ಕಾರ್ಯವನ್ನು ಯಾರಲ್ಲಾದರೂ ಪ್ರಾರಂಭ ಮಾಡಿದರೆ ಅದನ್ನು ಮುಗಿಸುವ ಉದ್ದೇಶವುಳ್ಳವನಾಗಿರುತ್ತಾನೆ ಮತ್ತು ಮುಗಿಸುತ್ತಾನೆ. ಪೌಲನಿಗೆ ಈ ವಿಷಯದಲ್ಲಿ ಭರವಸೆಯಿತ್ತು ಮತ್ತು ನಮಗೂ ಇರಬೇಕು. 2:12-13 ರಲ್ಲಿ ನಾವೂ ಈ ಕಾರ್ಯದಲ್ಲಿ ಸಹಕರಿಸಬೇಕು ಎಂಬದನ್ನು ನೋಡುತ್ತೇವೆ. ಅಲ್ಲಿ ನೋಟ್ಸ್ ನೋಡಿರಿ.

*“ಯೇಸು ಕ್ರಿಸ್ತನು ಬರುವ ದಿನ”*– ಯೇಸು ಕ್ರಿಸ್ತನ ಎರಡನೇ ಬರೋಣ. **7**

**1:7** *“ನನ್ನ ಹೃದಯದಲ್ಲಿ”*– 2 ಕೊರಿಂಥ 3:2; 6:11; 7:3.

*“ಬೇಡಿಗಳಲ್ಲಿ”*– ವ 13; ಎಫೆ 4:1; 6:20.

*“ನೀವೆಲ್ಲರೂ ನನ್ನೊಂದಿಗೆ”*– ದೇವರ ಸೇವಕರಿಗೆ ಸುವಾರ್ತೆಗೆ ವಿರುದ್ಧವಾಗಿ ಬರುವ ಆಕ್ರಮಗಳು, ವಿರೋಧಗಳು, ಹರಟೆಗಳು, ತಪ್ಪು ತಿಳುವಳಿಕೆಗಳು, ಇತ್ಯಾದಿಗಳನ್ನು ಸಮರ್ಥಿಸಿಕೊಳ್ಳುವದು ಹಾಗು ಸುವಾರ್ತೆಯನ್ನು ಸಾರುವದು ಹೇಗೆ ಎಂಬದು ಗೊತ್ತಿರಬೇಕು.

*“ಕೃಪೆ”*– ಯೋಹಾನ 1:14; ರೋಮಾ 1:7 ರ ನೋಟ್ ನೋಡಿರಿ. ದೇವರ ಕೃಪೆ ಅವರನ್ನು ಯೇಸು ಕ್ರಿಸ್ತನಲ್ಲಿ ವಿಶ್ವಾಸಿಗಳನ್ನಾಗಿ ಮಾಡಿದೆ ಮತ್ತು ಯೇಸು ಕ್ರಿಸ್ತನ ದೇಹವಾಗಿರುವ ನಿಜವಾದ ಸಭೆಗೆ ಸೇರಿಸಿದೆ. **8**

**1:8** ಯೇಸು ಕ್ರಿಸ್ತನು ಪೌಲನಲ್ಲಿದ್ದನು ಮತ್ತು ಪೌಲನ ಪ್ರೀತಿಯು ಕ್ರಿಸ್ತನೇ ಅವನ

ಮೂಲಕ ಪ್ರೀತಿಸುವದಾಗಿತ್ತು – ಗಲಾ 2:20. ಯೇಸು ಕ್ರಿಸ್ತನು ಪ್ರೀತಿಸುತ್ತಿದ್ದ ರೀತಿಯನ್ನು ನಾವು ಕಲಿತುಕೊಳ್ಳದೆ ಹೋದರೆ ಆತನು ಪ್ರೀತಿಸುತ್ತಿದ್ದ ಹಾಗೆ ಪ್ರೀತಿಸುವದನ್ನು ಕಲಿತುಕೊಳ್ಳಲು ಆಗುವದಿಲ್ಲ – ಎಫೆ 3:17-19. ಕ್ರಿಸ್ತನಿಗೆ ವಿಧೇಯರಾಗಿ ಜೀವಿಸುವ ವಿಶ್ವಾಸಿಗಳಲ್ಲಿ ದೇವರಾತ್ಮನು ಪ್ರೀತಿಯನ್ನು ಫಲವಾಗಿ ಕೊಡುತ್ತಾನೆ – ಗಲಾ 5:22.

*"ನಾನು ನಿಮಗಾಗಿ ಹಂಬಲಿಸುತ್ತೇನೆ"*– ಇಲ್ಲಿ ಆತನು ಪ್ರತಿಯೊಬ್ಬ ಕ್ರೈಸ್ತನಿಗೂ ಇರಬೇಕಾದ ಮನಸ್ಥಿತಿಯನ್ನು ಪ್ರಕಟಪಡಿಸಿದ್ದಾನೆ. ಹಾಗೆಯೇ 4:1; ರೋಮಾ 1:11; 2 ಕೊರಿಂಥ 2:4; ಗಲಾ 4:19-20; 1 ಥೆಸ 2:17; 2 ತಿಮೊ 1:4. **9-11**

**1:9-11** ಪೌಲನು ಎಫೆಸದವರಿಗೆ – ಎಫೆ 1:17-19; 3:16-19 ಮತ್ತು ಕೊಲೊಸ್ಸೆಯವರಿಗೆ – ಕೊಲೊ 1:9-12 ಮಾಡಿರುವ ಪ್ರಾರ್ಥನೆಯೊಂದಿಗೆ ಹೋಲಿಸಿ ನೋಡಿರಿ. ಪೌಲನ ಪ್ರಾರ್ಥನೆಗಳಲ್ಲಿ, ದೇವರಾತ್ಮನ ಪ್ರೇರಣೆಯಿಂದ ನಮ್ಮ ಸೂಚನೆಗಳಿಗಾಗಿ ಬರೆಯಲಾಗಿರುವ ವಿಷಯಗಳಿಂದ, ದೇವರು ನಮಗಾಗಿ ಮತ್ತು ನಮ್ಮಲ್ಲಿ ಏನು ಮಾಡಲು ಬಯಸುತ್ತಾನೆ ಎಂಬದನ್ನು ಕಲಿತುಕೊಳ್ಳಲು ಸಾಧ್ಯವಾಗುತ್ತದೆ. ನಾವು ಇತರರಿಗಾಗಿ ಪ್ರಾರ್ಥಿಸುವದು ಹೇಗೆ ಎಂಬದನ್ನು ಕಲಿತುಕೊಳ್ಳಬಹುದು. **9**

**1:9** *"ನಿಮ್ಮ ಪ್ರೀತಿ"*– ದೇವರ ಮೇಲೆ ಮತ್ತು ಜೊತೆಯಲ್ಲಿರುವ ವಿಶ್ವಾಸಿಗಳ ಮೇಲೆ ಹಾಗೂ ಎಲ್ಲಾ ಮಾನವರ ಮೇಲೆ ಅವರಿಗಿರುವ ಪ್ರೀತಿಯ ಬಗ್ಗೆ ಆತನು ಮಾತನಾಡುತ್ತಾ ಇದ್ದಾನೆ. ಅವರ ಪ್ರೀತಿ ಸರಿಯಾದ ರೀತಿಯಲ್ಲಿ ಅಭಿವೃದ್ಧಿಯಾಗಬೇಕೆಂಬದು ಆತನ ಬಯಕೆಯಾಗಿದೆ. ನಿಜವಾದ ಪ್ರೀತಿ ಎಂದರೆ ಏನು ಮತ್ತು ಅದನ್ನು ತಮ್ಮ ಕ್ರಿಯೆಯ ಮೂಲಕ ಇತರರಿಗೆ ತೋರಿಸುವದು ಹೇಗೆ ಎಂಬದನ್ನು ಅವರು ಹೆಚ್ಚೆಚ್ಚಾಗಿ ತಿಳಿದುಕೊಳ್ಳಬೇಕು. ಈ ಪ್ರೀತಿ ಕುರುಡಾಗಿರಬಾರದು ಬದಲಾಗಿ ಯೇಸು ಕ್ರಿಸ್ತನು ಹಾಗೂ ಆತನ ಪ್ರೀತಿಯ ಕುರಿತು ಪೂರ್ಣವಾದ ಮಾಹಿತಿಯುಳ್ಳದ್ದಾಗಿರಬೇಕು – ಎಫೆ 3:17-19. **10**

**1:10** *"ಉತ್ತಮ ಕಾರ್ಯಗಳು ಯಾವುವೆಂದು ವಿವೇಚಿಸಬೇಕು"*– ವಿಶ್ವಾಸಿಗಳಾಗಿ ಒಂದೇ ಸಭೆಯಲ್ಲಿರುವ ಅವನ ಜೀವನದ ಬಗ್ಗೆ ಆತನು ಮಾತನಾಡುತ್ತಾ ಇದ್ದಾನೆ. ಅವನು ಕೆಲವು ಉತ್ತಮವಾದ ಕಾರ್ಯಗಳನ್ನು 2:1-5,14,15; 4:8-9 ರಲ್ಲಿ ತಿಳಿಸಿದ್ದಾನೆ. **11**

**1:11** *"ಫಲಗಳು"*– ಮತ್ತಾಯ 7:17; ರೋಮಾ 6:22; 7:4; ಗಲಾ 5:22; ಎಫೆ 5:9.

*"ಸುನೀತಿ"*– ಇಬ್ರಿ 12:11; ಯಾಕೋಬ 3:18 – ದೇವರೊಂದಿಗೆ ಸರಿಯಾದ

ಸಂಬಂಧದಿಂದ ಉಂಟಾಗುವ ಫಲ.

*"ಯೇಸು ಕ್ರಿಸ್ತನ ಮೂಲಕ"*– ಆತನ ಮೂಲಕ ಮಾತ್ರವೇ ದೇವರಿಗೆ ಅಂಗೀಕೃತವಾದ ಫಲ ದೊರೆಯಲು ಸಾಧ್ಯ (ಯೋಹಾನ 15:4-5).

*"ದೇವರಿಗೆ ಘನತೆ ಮತ್ತು ಸ್ತೋತ್ರ ಉಂಟಾಗಲು"*– ಎಫೆ 1:6,12,14. **12**

**1:12** ಇಲ್ಲಿ ಅವನನ್ನು ಬಂಧಿಸಲಾಯಿತು ಮತ್ತು ಸೆರೆಮನೆಗೆ ಹಾಕಲಾಯಿತು. ಇದರ ನಿಮಿತ್ತ ಅವನು ನಿರಾಸೆಗೆ ಒಳಗಾಗುವದಾಗಲಿ ಅಥವಾ ಗುಣಗುಟ್ಟುವದಾಗಲಿ ಅಥವಾ ಆರೋಪ ಮಾಡುವದಾಗಲಿ ಮಾಡಲಿಲ್ಲ. ಆದಿ 50:20 ರೊಂದಿಗೆ ಹೋಲಿಸಿ ನೋಡಿರಿ. ಆತನು ತಾನೇ ರೋಮಾ 8:28 ರಲ್ಲಿ ಬರೆದಿರುವದನ್ನು ನಂಬಿದ್ದನು.

*"ಪ್ರಸಾರಣೆ"*– ಸುವಾರ್ತಾ ಪ್ರಸಾರಣಕ್ಕೆ ಯಾವುದೇ ಅಡ್ಡಿ ಎಂದು ಕೆಲವರು ಯೋಚಿಸುತ್ತಾರೋ ಅದುವೇ ಸುವಾರ್ತೆಯ ಪ್ರಸಾರಣೆಗೆ ಅನುಕೂಲಕರವಾಗಿರುತ್ತದೆ ಮತ್ತು ವಿಪತ್ತುಗಳಾಗಿ ತೋರುವವುಗಳೇ ಆಶೀರ್ವಾದಕರವಾಗಿರುತ್ತವೆ. ದೇವರ ಹಸ್ತಗಳಲ್ಲಿ ವಿಶ್ವಾಸಿಗಳ ಜೀವಿತದ ಎಲ್ಲಾ ಕಾರ್ಯಗಳು ಒಳ್ಳೆಯ ಉದ್ದೇಶಗಳಿಗೆ ಕಾರಣವಾಗುತ್ತವೆ. **13**

**1:13** ರೋಮನ್ ಚಕ್ರವರ್ತಿ ಅಥವಾ ರಾಜ್ಯಪಾಲ ಅಥವಾ ರಾಜನನ್ನು ಸೇವಿಸುತ್ತಿದ್ದ ಸಿಪಾಯಿಗಳು, ಪೌಲನನ್ನು ಕಾಯುವವರಾಗಿದ್ದರು, ಪೌಲನು ಅವರೆದುರಿನಲ್ಲಿ ಯೇಸು ಕ್ರಿಸ್ತನ ಸಾಕ್ಷಿಯಾಗಿ ನಡೆದುಕೊಂಡನು (ಪೌಲನು ಈ ಪತ್ರಿಕೆಯನ್ನು ಬರೆಯುವಾಗ ಸೆರೆಮನೆಯಲ್ಲಿ ಇದ್ದನೋ ಇಲ್ಲವೋ ಎಂಬದು ನಮಗೆ ಗೊತ್ತಿಲ್ಲ). ಆದರೆ ಸುವಾರ್ತೆ ತಲುಪದೆ ಇದ್ದ ಸ್ಥಳಗಲ್ಲಿ ಹೆಚ್ಚಾಗಿ ತಲುಪಲಾರಂಭಿಸಿತು. 2 ತಿಮೊ 2:9 ರೊಂದಿಗೆ ಹೋಲಿಸಿ ನೋಡಿರಿ.

*"ನನ್ನ ಬೇಡಿಗಳು ಕ್ರಿಸ್ತನ ನಿಮಿತ್ತವೇ"*– ಪೌಲನು ಅಪರಾಧಿಯಲ್ಲ, ಧರ್ಮಶಾಸ್ತ್ರವನ್ನು ಉಲ್ಲಂಘನೆ ಮಾಡಿಲ್ಲ ಆದರೆ ಯೇಸು ಕ್ರಿಸ್ತನ ಸುವಾರ್ತೆ ಸಾರಿರುವದರ ನಿಮಿತ್ತವಾಗಿಯೇ ಸೆರೆಮನೆಯಲ್ಲಿದ್ದಾನೆ ಎಂಬದು ಎಲ್ಲರಿಗೂ ತಿಳಿದಿತ್ತು. **14**

**1:14** ತನ್ನನ್ನು ಸೆರೆಯಾಗಿ ಇರಿಸಿಕೊಂಡಿದ್ದ ಅಧಿಕಾರಿಗಳು ಮತ್ತು ಸಿಪಾಯಿಗಳಿಗೆ ಪೌಲನು ಸುವಾರ್ತೆಯನ್ನು ಸಾರುತ್ತಾ ಇರುವದು ಬಹಳ ಧೈರ್ಯದ ಕೆಲಸ ಎಂಬದು ಅವರಿಗೆ ತಿಳಿದಿತ್ತು. ಅವನ ಧೈರ್ಯದ ಮಾದರಿಯು ಅವರನ್ನು ಹೆಚ್ಚು ಧೈರ್ಯಶಾಲಿಗಳನ್ನಾಗಿ ಮಾಡಿತು. ಇದು ಸಹ ಸುವಾರ್ತಾ ಪ್ರಸಾರಣೆಗೆ ಕಾರಣವಾಯಿತು. **15-17**

**1:15-17** ಆದರೆ ಸುವಾರ್ತೆಯನ್ನು ಸಾರುತ್ತಿದ್ದವರೆಲ್ಲರೂ ಒಳ್ಳೆಯ ಉದ್ದೇಶದಿಂದ

ಸುವಾರ್ತೆ ಸಾರುತ್ತಾ ಇರಲಿಲ್ಲ. ಕೆಲವರು ಪೌಲನ ಪ್ರಸಿದ್ಧಿ ಮತ್ತು ಯಶಸ್ಸನ್ನು ಕಂಡು ಹೊಟ್ಟೆಕಿಚ್ಚುಪಡುತ್ತಾ ಇದ್ದರು ಹಾಗೂ ತಮ್ಮನ್ನು ಅವನ ವೈರಿಗಳೆಂದು ಪರಿಗಣಿಸಿಕೊಂಡಿದ್ದರು. ಸ್ವಾರ್ಥ ಚಿಂತನೆಯು ಅವರ ಹೊರನೋಟ ಮತ್ತು ಸೇವೆಯ ಲಕ್ಷಣಗಳಾಗಿದ್ದವು. ಇದು ಇಂದೂ ಸತ್ಯವಾಗಿದೆ. ಕೆಲವು ಬೋಧಕರು ಪ್ರಸಿದ್ಧರಾಗಲು ಬಯಸುತ್ತಾರೆ, ತಮಗಾಗಿ ಯಶಸ್ಸು ಸಾಧಿಸಲು ಇಚ್ಛಿಸುತ್ತಾರೆ, ಇತರೆ ಬೋಧಕರನ್ನು ತುಳಿಯಲು ಪ್ರಯತ್ನಿಸುತ್ತಾರೆ ಮತ್ತು ತಮ್ಮಿಂದ ಆಗುವ ಹಾಗಿದ್ದರೆ ಅವರಿಗೆ ತೊಂದರೆ ಪಡಿಸಲು ಯೋಚಿಸುತ್ತಾರೆ. ಆದರೆ ಆಗಿನಂತೆ ಈಗಲೂ ಕೆಲವರು ಯಥಾರ್ಥವಾಗಿ, ಆತನ ಮೇಲಿನ ಪ್ರೀತಿಯಿಂದ ಮತ್ತು ಮಾನವರ ಆತ್ಮಗಳ ನಿಮಿತ್ತ ಸುವಾರ್ತೆಯನ್ನು ಸಾರುತ್ತಾರೆ. **18**

**1:18** ಪೌಲನು ತನ್ನನ್ನು ಯಾರೊಂದಿಗೂ ಸ್ಪರ್ಧಿ ಎಂದು ಪರಿಗಣಿಸುತ್ತಾ ಇರಲಿಲ್ಲ. ಯೇಸು ಕ್ರಿಸ್ತನು ಮತ್ತು ಆತನ ಸುವಾರ್ತೆ ಎಲ್ಲಾ ಕಡೆಗಳಲ್ಲಿಯೂ ಪ್ರಸಾರವಾಗಬೇಕೆಂದು ಅವನು ಬಯಸಿದನು. ಜನರು ಅವನನ್ನು ಇಷ್ಟಪಡದೆ ಹೋದರೂ ಮತ್ತು ಸುವಾರ್ತೆಯನ್ನು ಸಾರುವ ನಿಮಿತ್ತ ತೊಂದರೆ ಕೊಟ್ಟರೂ, ಅವರ ಉದ್ದೇಶಗಳು ಸರಿಯಾಗಿರದೆ ಇದ್ದರೂ ಅವನು ಸಂತೋಷಿಸುವವನಾಗಿದ್ದನು. ತಾನು ಪ್ರಸಿದ್ಧನಾಗುವದಲ್ಲ ಬದಲಾಗಿ ಯೇಸು ಕ್ರಿಸ್ತನು ಪ್ರಸಿದ್ಧನಾಗಬೇಕೆಂದು ಅವನು ಬಯಸಿದನು. ಇಲ್ಲಿ ಎಲ್ಲಾ ಬೋಧಕರಿಗೂ ವಿಶೇಷವಾದ ಪಾಠವನ್ನು ನಾವು ನೋಡಬಹುದು. ಇಲ್ಲಿ ಪೌಲನು ಯೇಸು ಕ್ರಿಸ್ತನ ಕುರಿತಾದ ಸತ್ಯ ಮತ್ತು ಆತನ ಸುವಾರ್ತೆಯನ್ನು ಸಾರುತ್ತಿದ್ದ ಬೋಧಕರ ಬಗ್ಗೆ ಮಾತನಾಡುತ್ತಾ ಇದ್ದಾನೆಯೇ ಹೊರತು, ತನ್ನ ಇತರೆ ಪತ್ರಿಕೆಗಳಲ್ಲಿ ತಾನು ಎಚ್ಚರಿಕೆಗಳನ್ನು ನೀಡಿದವರ ಬಗ್ಗೆ ಮಾತನಾಡುತ್ತಾ ಇಲ್ಲ (2 ಕೊರಿಂಥ 11:13-15; ಗಲಾ 1:7-8). **19**

**1:19** ಪೌಲನು ಬಹುಶಃ ತನಗೆ ವಿರುದ್ಧವಾಗಿ ಜನರು ಮಾಡಿರುವ ಅರೋಪಗಳಿಂದ ಬಿಡುಗಡೆಯಾಗುವ ಬಗ್ಗೆ ಮತ್ತು ಆ ಸಮಯದಲ್ಲಿ ಆಗಬೇಕಿದ್ದ ಮರಣದಿಂದ ಬಿಡುಗಡೆಯಾಗುವ ಬಗ್ಗೆ – ವ 25,26 ಮಾತನಾಡುತ್ತಾ ಇದ್ದಾನೆ ಎಂಬದಾಗಿ ಅನ್ನಿಸುತ್ತದೆ.

*"ನಿಮ್ಮ ಪ್ರಾರ್ಥನೆಯ ಮೂಲಕ"*– ಫಿಲೆ 1:22; ರೋಮಾ 15:30-32.

*"ಯೇಸು ಕ್ರಿಸ್ತನ ಆತ್ಮ"*– ರೋಮಾ 8:9 ಮತ್ತು ನೋಟ್ ನೋಡಿರಿ. **20**

**1:20** ಯಾವುದೇ ಸಮಯದಲ್ಲಾದರೂ ಯಾವುದೇ ಪರಿಸ್ಥಿತಿಯಲ್ಲಾದರೂ ಯೇಸು ಕ್ರಿಸ್ತನ ಬಗ್ಗೆ ಧೈರ್ಯದಿಂದ ಮಾತನಾಡುವ ಸಾಮರ್ಥ್ಯವನ್ನು ತಾನು ಕಳೆದುಕೊಳ್ಳುವದಿಲ್ಲ

ಎಂಬ ಪೂರ್ಣ ನಿರೀಕ್ಷೆ ಅವನಿಗಿತ್ತು. ಎಫೆ 6:19-20 ರೊಂದಿಗೆ ಹೋಲಿಸಿ ನೋಡಿರಿ.

*"ಕ್ರಿಸ್ತನಿಗೆ ಮಹಿಮೆ"*– ಪೌಲನು ಗಲಾ 1:16 ರಲ್ಲಿ ಈ ವಿಷಯವನ್ನು ಹೇಳಿದಾಗಿನಿಂದ ಆತನ ಜೀವನ ಹಾಗೂ ಸೇವೆಯಲ್ಲಿ ನಾವು ಇದರ ಫಲಿತಾಂಶವನ್ನು ನೋಡಬಹುದು ಮತ್ತು ಇದುವೇ ಮಾತ್ರವೇ ಅವನ ಗುರಿ ಹಾಗೂ ನಿರೀಕ್ಷೆಯಾಗಿತ್ತು. ಬದುಕಿದರೂ ಸತ್ತರೂ ಇದಕ್ಕಿಂತ ದೊಡ್ಡ ಉದ್ದೇಶ ಬೇರೆ ಯಾವುದೂ ಇರಲಾರದು.

*"ನನ್ನ ಶರೀರದಲ್ಲಿ"*– ಪೌಲನ ಕ್ರಿಯೆಗಳು, ಅನುದಿನದ ನಡವಳಿಕೆಗಳು, ಅವನ ಬಾಯಿಯ ಮಾತುಗಳ ಮೂಲಕ ಯೇಸು ಕ್ರಿಸ್ತನಿಗೆ ಮಹಿಮೆಯಾಗುತ್ತಾ ಇತ್ತೇ ಹೊರತು ಅವನ ಆಲೋಚನೆಗಳು ಹಾಗೂ ಬಯಕೆಗಳಿಂದ ಮಾತ್ರವಲ್ಲ. **21**

**1:21** *"ಬದುಕುವದೆಂದರೆ ಕ್ರಿಸ್ತನೇ"*– ಗಲಾ 2:20. ಪೌಲನು ತನ್ನೊಳಗಿದ್ದ ಕ್ರಿಸ್ತನ ಜೀವಿತದ ಮೂಲಕ ಜೀವಿಸುತ್ತಾ ಇದ್ದನೇ ಹೊರತು ತನ್ನ ಸ್ವಂತ ಜೀವದಿಂದಲ್ಲ. ಅವನು ಯೇಸು ಕ್ರಿಸ್ತನ ಶಕ್ತಿಯ ಮೂಲಕ ಜೀವಿಸುತ್ತಾ ಇದ್ದನೇ ಹೊರತು ತನ್ನ ಶಕ್ತಿಯಿಂದಲ್ಲ. ಯೇಸು ಕ್ರಿಸ್ತನಿಗೆ ಮಹಿಮೆಯಾಗಬೇಕೇ ಹೊರತು ತನಗಲ್ಲ ಎಂಬದೇ ಅವನ ಗುರಿಯಾಗಿತ್ತು.

*"ಸಾಯುವದು ಲಾಭವೇ"*– ಪೌಲನಿಗೆ ಮರಣದ ಭಯ ಇರಲಿಲ್ಲ (ಇಬ್ರಿ 2:15 ನೋಡಿರಿ). ಕೀರ್ತನೆ 116:15 ರ ಸತ್ಯ ಅವನಿಗೆ ತಿಳಿದಿತ್ತು. ತಾನು ಬದುಕಿದ್ದರೂ ಸತ್ತರೂ ಯೇಸು ಕ್ರಿಸ್ತನಿಗೆ ಮಹಿಮೆಯಾಗುವದು ಎಂಬದು ಅವನಿಗೆ ತಿಳಿದಿತ್ತು – ವ 20. ಮತ್ತು 23 ನೇ ವಚನ ಹೇಳುವದೇನೆಂದರೆ, ಯೇಸು ಕ್ರಿಸ್ತನೊಂದಿಗೆ ಇರಲು ಹೋಗುತ್ತಾ ಇದ್ದೇನೆ ಎಂಬದೇ ಅವನ ಸಂತೋಷದ ಪ್ರಮುಖ ಕಾರಣವಾಗಿತ್ತು. ಸಾಯುವದು ಲಾಭವೇ ಎಂಬದು ಎಲ್ಲರ ವಿಷಯದಲ್ಲಿಯೂ ಸತ್ಯವಾಗಿದೆಯೇ? ಇಲ್ಲ – ಯಾರು ಯೇಸು ಕ್ರಿಸ್ತನಿಗಾಗಿ ಜೀವಿಸುತ್ತಾರೋ ಅವರ ವಿಷಯದಲ್ಲಿ ಮಾತ್ರವೇ ಸತ್ಯವಾಗಿದೆ. ಯಾರ ಜೀವಿತವು ಸ್ವಾರ್ಥದಿಂದ ಕೂಡಿರುವದಿಲ್ಲವೋ ಅವರಿಗೆ ಮರಣವು ಲಾಭವಾಗಿರುತ್ತದೆ. ಯೇಸು ಕ್ರಿಸ್ತನನ್ನು ಅರಿಯದೆ ಇರುವವರಿಗೆ ಮರಣವು ವೈರಿಯಾಗಿದೆ. **22**

**1:22** *"ನನ್ನ ಪರಿಶ್ರಮದ ಫಲ"*– ರೋಮಾ 1:13; 7:4. ಯೇಸು ಕ್ರಿಸ್ತನಿಗಾಗಿ ತಾನು ಪಡುವ ಪ್ರಯಾಸಗಳು ಸಫಲವಾಗುತ್ತವೆ ಎಂಬ ಆತನ ಆತ್ಮವಿಶ್ವಾಸವನ್ನು ಗಮನಿಸಿರಿ. ತನ್ನಲ್ಲಿರುವ ಯೇಸು ಕ್ರಿಸ್ತನು ಈ ಕಾರ್ಯವನ್ನು ಮಾಡುತ್ತಾ ಇದ್ದಾನೆ ಎಂಬ ತಿಳುವಳಿಕೆಯಿಂದ ಆತನಿಗೆ ಈ ವಿಶ್ವಾಸವು ಬಂದಿದ – ಕೊಲೊ 1:29.

*"ಯಾವದನ್ನಾರಿಸಿಕೊಳ್ಳಬೇಕೋ"*– ಜೀವಿಸುವವರು ಮತ್ತು ಸಾಯುವವರು ಆತನಿಗೆ

ಅಂಗೀಕೃತರಾಗಿದ್ದರು. ತನಗೆ ಯಾವುದು ಬಹಳ ಮುಖ್ಯ ಎಂಬದನ್ನು ತೀರ್ಮಾನಿಸಲು ಅವನಿಗೆ ಬಹಳ ಕಷ್ಟವಾಗಿತ್ತು. **23**

**1:23** *"ಕ್ರಿಸ್ತನ ಜೊತೆಯಲ್ಲಿರಬೇಕು"*– 2 ಕೊರಿಂಥ 5:8; ಲೂಕ 23:43. ವಿಶ್ವಾಸಿಯು ಮರಣದ ನಂತರ ಕರ್ತನಾದ ಯೇಸು ಕ್ರಿಸ್ತನ ಪ್ರಸನ್ನತೆಗೆ ಸೇರುತ್ತಾನೆ. **25**

**1:25** *"ನಿಮ್ಮೆಲ್ಲರ ಬಳಿಯಲ್ಲಿರುವೆನು"*– ವೈಯಕ್ತಿಕವಾಗಿ ಅವನು ಸಾಯಲು ಮತ್ತು ಕ್ರಿಸ್ತನ ಬಳಿಗೆ ಹೋಗಲು ಬಯಸುತ್ತಾ ಇದ್ದನು. ಅವನಿಗೆ ಇದು ಭೂಮಿಯ ಮೇಲೆ ಇರುವದಕ್ಕಿಂತ ಉತ್ತಮವಾದದ್ದಾಗಿತ್ತು. ಆದರೆ ಸಾಮಾನ್ಯವಾಗಿ ಅವನಿಗೆ ಏನು ಬೇಕಾಗಿತ್ತು ಅದು ಪ್ರಾಮುಖ್ಯವಾದ ವಿಷಯವಾಗಿರಲಿಲ್ಲ. ಇತರರ ಅವಶ್ಯಕತೆಗಳು – ಇದುವೇ ಅವನ ಕ್ರಿಯೆಗಳು ಮತ್ತು ಪ್ರಾರ್ಥನೆಗಳನ್ನು ದೃಢಪಡಿಸುವವುಗಳಾಗಿದ್ದವು. 1 ಕೊರಿಂಥ 9:19-23; 10:24,33 ರೊಂದಿಗೆ ಹೋಲಿಸಿ ನೋಡಿರಿ. ಆದರೆ ಪೌಲನಿಗೆ ತಾನು ಆ ಸಮಯದಲ್ಲಿ ಸಾಯುವದಿಲ್ಲ ಎಂದು ಹೇಗೆ ತಿಳಿದಿತ್ತು? ಅವನು ತನ್ನ ಬಿಡುಗಡೆಗಾಗಿ ಮಾಡಿದ ಪ್ರಾರ್ಥನೆಗೆ ಉತ್ತರವು ದೊರೆಯುವದು ಎಂಬ ಭರವಸೆಯನ್ನು ದೇವರು ಅವನಿಗೆ ಕೊಟ್ಟಿದ್ದನು – ವ 19; 2:24.

*"ನಂಬಿಕೆಯಲ್ಲಿ ಅಭಿವೃದ್ಧಿ"*– ಎಫೆ 4:12-13. ನಂಬಿಕೆಯ ಅಭಿವೃದ್ಧಿಯೊಂದಿಗೆ ಸಂತೋಷವು ಸೇರಿರುತ್ತದೆ. ಪ್ರತಿಯೊಬ್ಬ ಕ್ರೈಸ್ತನು ಈ ಲೋಕದ ಯಾವುದೇ ಕಾರ್ಯಗಳಲ್ಲಿ ಅಭಿವೃದ್ಧಿಯಾಗುವದರ ಬಗ್ಗೆ ಚಿಂತಿಸದೆ ಕ್ರೈಸ್ತೀಯ ನಂಬಿಕೆಯಲ್ಲಿ ಅಭಿವೃದ್ಧಿಯಾಗುವದರ ಬಗ್ಗೆ ಚಿಂತಿಸುವವರಾಗಿರಬೇಕು. **27**

**1:27** *"ಯೋಗ್ಯರಾಗಿ"*– ಎಫೆ 4:1; ಕೊಲೊ 1:10; 1 ಥೆಸ 2:12.

*"ದೃಢವಾಗಿ"*– ಎಫೆ 6:11,14.

*"ಒಂದೇ ಆತ್ಮ", "ಐಕಮತ್ಯ"*– 2:2; ಎಫೆ 4:2; 1 ಕೊರಿಂಥ 1:10; ರೋಮಾ 12:16.

*"ಹೋರಾಡುವವರಾಗಿದ್ದೇವೆ"*– ವ 7; ಯೂದ 3. ಸುವಾರ್ತೆಯ ಮೇಲೆ ಆಕ್ರಮಣಗಳು ನಡೆಯುವಾಗ ವಿಶ್ವಾಸಿಗಳು ಎಂದಿಗೂ ದುರ್ಬಲವಾಗಿ ಒಪ್ಪಿಸಿಕೊಡಬಾರದು, ಸುಳ್ಳು ಮತ್ತು ತಪ್ಪಾದ ಬೋಧನೆಗಳೊಂದಿಗೆ ಎಂದಿಗೂ ರಾಜಿಯಾಗಬಾರದು. ಸುವಾರ್ತೆಯ ಸತ್ಯಗಳಿಗೆ ಅನುಸಾರ ಕಷ್ಟಪಡುವದು ಯೋಗ್ಯವಾಗಿದೆ ಮತ್ತು ಆ ಕಾರ್ಯವನ್ನು ನಾವು ದೇವರು ನಮಗೆ ಕೊಡುವ ಜ್ಞಾನ, ಆತ್ಮೀಕ ಬಲ ಮತ್ತು ಸಾಮರ್ಥ್ಯ (ಹಾಗೂ ಪ್ರೀತಿಯಿಂದ) ಮಾಡಬೇಕು. **28**

**1:28** *“ಹೆದರಿಕೊಳ್ಳುವದಿಲ್ಲ”*– ವ 14,20; ಮತ್ತಾಯ 10:28; ಇಬ್ರಿ 13:6..

*“ನಿಮ್ಮ ವಿರೋಧಿಗಳು”*– ವ 30.

*“ಪ್ರಮಾಣ” (ಗುರುತು)”*– ಯೇಸು ಕ್ರಿಸ್ತನಲ್ಲಿ ಅವರು ಧೈರ್ಯವಾಗಿರುವದು ದೇವರು ಅವರೊಂದಿಗಿದ್ದಾನೆ ಎಂಬದಕ್ಕೆ ಪುರಾವೆಯಾಗಿತ್ತು. ಅಪೊ 4:13; 2 ಥೆಸ 1:4-7 ನೋಡಿರಿ. ದೇವರು ಯೇಸು ಕ್ರಿಸ್ತನ ವಿಶ್ವಾಸಿಗಳೊಂದಿಗೆ ಇದ್ದಾನೆ ಎಂಬದನ್ನು ಅವರ ವಿರೋಧಿಗಳು ತಿಳಿದುಕೊಳ್ಳುತ್ತಾ ಇದ್ದರು, ಆತನನ್ನು ವಿರೋಧಿಸುವವರ ಸಂಗಡ ಆತನು ಇರಲಿಲ್ಲ. **29**

**1:29** *“ನಂಬಿಕೆಯಿಡಲು . . . ಅನುಗ್ರಹವಾಯಿತು”*– ನಂಬಿಕೆ ದೇವರು ಕೊಡುವ ವರವಾಗಿದೆ – ಎಫೆ 2:8. “ಯೇಸು ಕ್ರಿಸ್ತನಿಗಾಗಿ “ಶ್ರಮೆಗಳನ್ನು ಅನುಭವಿಸುವದು” ದೇವರು ಕೊಡುವ ವರವಾಗಿದೆ. ಇದು ಭೂಲೋಕದಲ್ಲಿ ನಮಗಿರುವ ದೊಡ್ಡ ಸೌಭಾಗ್ಯವಾಗಿದೆ. ಇದನ್ನು ತಿಳಿದವರು ಸಂತೋಷವುಳ್ಳವರಾಗಿರುತ್ತಾರೆ. 3:10; ಅಪೊ 5:41; ರೋಮಾ 5:3; 2 ಕೊರಿಂಥ 1:5; 1 ಪೇತ್ರ 3:13-14,16 ನೋಡಿರಿ. ನಮಗಾಗಿ ಶ್ರಮೆಗಳನ್ನನುಭವಿಸಿ ಪ್ರಾಣ ನೀಡಿದ ಕರ್ತನಾದ ಯೇಸು ಕ್ರಿಸ್ತನಿಗಾಗಿ ಶ್ರಮೆಗಳನ್ನನುಭವಿಸುವದು ಗೌರವವಾದ ವಿಷಯವಲ್ಲವೇ? ಪ್ರೀತಿಯು “ಹೌದು” –ಎಂಬದಾಗಿ ಉತ್ತರಿಸುತ್ತದೆ ಮತ್ತು ಆತನ ನಿಮಿತ್ತ ಎದುರಾಗುವ ಅನಾನುಕೂಲತೆ, ಕಷ್ಟಗಳು, ಹಿಂಸೆ, ತೊಂದರೆ ಅಥವಾ ಶ್ರಮೆಗಳನ್ನು ತಪ್ಪಿಸಿಕೊಳ್ಳಲು ಬಯಸುವದಿಲ್ಲ. **30**

**1:30** *“ನನ್ನಲ್ಲಿ”*– ಫಿಲಿಪ್ಪಿಯಲ್ಲಿ ಪೌಲನಿಗೆ ಎದುರಾದ ಕೆಲವು ಕಷ್ಟಗಳನ್ನು ತಿಳಿಯಲು ಅಪೊ 16:19-40 ನೋಡಿರಿ. ಆ ಸ್ಥಳದಲ್ಲಿ ಸುವಾರ್ತೆಯನ್ನು ವಿರೋಧಿಸುವವರು ಇನ್ನೂ ಅನೇಕರಿದ್ದರು ಮತ್ತು ಅಲ್ಲಿದ್ದ ವಿಶ್ವಾಸಿಗಳು ಅವರ ಕೈಗಳಲ್ಲಿ ಹಿಂಸೆಗಳನ್ನು ಅನುಭವಿಸುತ್ತಿದ್ದರು.

# 2 1-2

**2:1-2** ಪೌಲನು ಅಲ್ಲಿದ್ದ ಸಭೆಯಲ್ಲಿ ಸಾಮರಸ್ಯದ ಕೊರತೆಯಿದ್ದರಿಂದ ಚಿಂತಿಸುತ್ತಿದ್ದನು – 1:27; 4:2. ಯೇಸು ಕ್ರಿಸ್ತನಲ್ಲಿ ವಿಶ್ವಾಸಿಗಳಾಗಿ ಅವರು ಏನನ್ನು ಹೊಂದಿದ್ದಾರೆ ಎಂಬದರ ಆಧಾರದ ಮೇರೆಗೆ ಅವನು ಅವರಿಗೆ ಮನವಿಯನ್ನು ಮಾಡುತ್ತಾ ಇದ್ದಾನೆ. **1**

**2:1** *“ಇದ್ದರೆ”*– ಇಲ್ಲಿ ಹೇಳಿರುವ ವಿಷಯಗಳು ಅವರಲ್ಲಿ ಇವೆಯೋ ಇಲ್ಲವೋ ಎಂಬದಾಗಿ ಅವನು ಸಂದೇಹಪಡುತ್ತಾ ಇಲ್ಲ. ಇದರ ಅರ್ಥವೇನೆಂದರೆ “ನಿಮ್ಮಲ್ಲಿ ಇವೆಲ್ಲವುಗಳು ಇರುವದರಿಂದ”.

*“ಕ್ರಿಸ್ತನಲ್ಲಿ”*– ಯೋಹಾನ 17:20-23; ರೋಮಾ 6:5; ಎಫೆ 4:15-16.

*“ಉತ್ತೇಜನ”*– 2 ಕೊರಿಂಥ 1:3,5,7.

*“ಅನ್ಯೋನ್ಯತೆ”*– 2 ಕೊರಿಂಥ 13:14.

*“ಕಾರುಣ್ಯದಯಾರಸಗಳು”*– ಇತರೆ ವಿಶ್ವಾಸಿಗಳ ವಿಷಯದಲ್ಲಿ ಪ್ರತಿಯೊಬ್ಬ ವಿಶ್ವಾಸಿಗೆ ಇರಬೇಕಾದ ಗುಣಗಳು. **3**

**2:3** *“ಪಕ್ಷಪಾತ”*– 1:17; ಯೆರೆ 45:5; 1 ಕೊರಿಂಥ 3:5; ಗಲಾ 5:20.

*“ಮತ್ತೊಬ್ಬರನ್ನು ತನಗಿಂತಲೂ ಶ್ರೇಷ್ಠರೆಂದು ಎಣಿಸಲಿ”*– ರೋಮಾ 12:10,16; ಗಲಾ 5:26; 1 ಪೇತ್ರ 5:5-6. ಪೌಲನಲ್ಲಿಯೇ ಇದರ ಮಾದರಿಯನ್ನು ನೋಡಿರಿ – ಎಫೆ 3:8; 1 ತಿಮೊ 1:15. **4**

- **2:4** ರೋಮಾ 14:19; 15:21; 1 ಕೊರಿಂಥ 10:24. **5-11**

**2:5-11** ಪೌಲನು ಇತರರಿಗೆ ತೋರಿಸಬೇಕಾದ ಮಹತ್ತರವಾದ ದೀನತೆ ಹಾಗೂ ಪ್ರೀತಿಯ ಉದಾಹರಣೆಯನ್ನು ಅವರಿಗೆ ತೋರಿಸಿದ್ದಾನೆ. ಯೇಸು ಕ್ರಿಸ್ತನಲ್ಲಿದ್ದಂಥ ಮನೋಭಾವನೆವುಳ್ಳವರಾಗಿರಲು, ಆತನು ಆಲೋಚಿಸುವಂತೆ ಆಲೋಚಿಸುವವರಾಗಿರಲು ವಿಶ್ವಾಸಿಗಳಿಗೆ ಸಾಧ್ಯವೇ? ಖಂಡಿತವಾಗಿಯೂ ಸಾಧ್ಯ ಇಲ್ಲವಾದರೆ ಪೌಲನು ಇದನ್ನು ಬರೆಯುತ್ತಾ ಇರಲಿಲ್ಲ ವ 5 ನೋಡಿರಿ. 1 ಕೊರಿಂಥ 2:16; ರೋಮಾ 8:5 ನೋಡಿರಿ. ಯೇಸು ಕ್ರಿಸ್ತನು ವಿಶ್ವಾಸಿಗಳಲ್ಲಿ ಇದ್ದಾನೆ ಮತ್ತು ಆತನು ಅವರ ಹೃದಯಗಳಲ್ಲಿ ಯಜಮಾನನಾಗಿರುವಾಗ (ಎಫೆ 3:17) ಅವರಿಗಿರಬೇಕಾದ ಆಲೋಚನೆಗಳು ಹಾಗೂ ಮನೋಭಾವನೆಗಳಿಂದ ಆತನು ಅವರ ಮನಸ್ಸುಗಳನ್ನು ತುಂಬಿಸುತ್ತಾನೆ. ಈ ಕಾರ್ಯವು ನಡೆಯುವಾಗ ಅವರಲ್ಲಿರುವ ಜಗಳ ಮತ್ತು ಸ್ವಾರ್ಥ, ಅಸಮಾಧಾನ ಮತ್ತು ಅಹಂಕಾರ ಕೊನೆಗೊಳ್ಳುತ್ತವೆ. ಹೊಸ ಒಡಂಬಡಿಕೆಯು ಇತರೆ ಭಾಗಗಳಲ್ಲಿ ಕಲಿಸುವ ಸತ್ಯದ ಸಾರಾಂಶವನ್ನು ಪೌಲನು ಈ ವಚನಗಳಲ್ಲಿ ಸಂಕ್ಷಿಪ್ತವಾಗಿ ತಿಳಿಸಿದ್ದಾನೆ. ಇಲ್ಲಿ ಪೌಲನ ಗುರಿ ಪ್ರಾಯೋಗಿಕವಾಗಿದೆ ಎಂಬದನ್ನು ನೆನಪನಲ್ಲಿಟ್ಟುಕೊಳ್ಳಿರಿ. ವಿಶ್ವಾಸಿಗಳು ತಮ್ಮ

ಜೀವಿತಗಳಿಗೆ ಅಳವಡಿಸಿಕೊಳ್ಳಬೇಕಾಗಿರುವ ಸತ್ಯವನ್ನು ಅವರು ಅವರಿಗೆ ಕಲಿಸುತ್ತಾ ಇದ್ದಾನೆ. ಯೇಸು ಕ್ರಿಸ್ತನು ಭೂಲೋಕದಲ್ಲಿರಬೇಕಾದ ಸಮಯಗಳಿಗಾಗಿ ಪರಲೋಕದಲ್ಲಿ ತನಗಿದ್ದ ಎಲ್ಲಾ ಘನಮಾನಗಳನ್ನು ತ್ಯಜಿಸಿದನು ಮತ್ತು ದೀನತೆಯುಳ್ಳವನಾಗಿ ಜೀವಿಸಿದನು. ವಿಶ್ವಾಸಿಗಳೆಲ್ಲರೂ ಈ ಲೋಕದ ಸುಳ್ಳು ಮತ್ತು ವಿನಾಶಕಾರಿ ಘನಮಾನಗಳನ್ನು ತ್ಯಜಿಸಬೇಕು ಮತ್ತು ದೀನತೆಯಿಂದ ದೇವರ ಹಾಗೂ ಇತರರ ಸೇವೆ ಮಾಡುತ್ತಾ ತಮ್ಮ ಜೀವಿತವನ್ನು ಕಳೆಯಬೇಕು. 6

**2:6** ದೇವಸ್ವರೂಪನಾಗಿದ್ದರೂ" – ಇಲ್ಲಿ ಬರೆಯಲಾಗಿರುವ ಗ್ರೀಕ್ ಪದ ಒಂದು ಅರ್ಥವನ್ನು ಮಾತ್ರ ಕೊಡುವದಾಗಿದೆ: ಯೇಸು ಕ್ರಿಸ್ತನು ದೇವರ ಸ್ವಭಾವದವನಾಗಿದ್ದನು. ಸತ್ಯವೇದದ ಇತರೆ ಭಾಗಗಳಲ್ಲಿ ಯೇಸು ಕ್ರಿಸ್ತನನ್ನು ದೇವರು ಎಂದು ಕರೆಯಲಾಗಿದೆ. ಯೆಶಾಯ 9:6; ಯೋಹಾನ 1:1; 20:28-29; ಅಪೊ 20:28; ರೋಮಾ 9:5; ತೀತ 2:13; ಇಬ್ರಿ 1:8; 1 ಯೋಹಾನ 5:20 ನೋಡಿರಿ. ಇವುಗಳಲ್ಲದೆ ಯೇಸು ಕ್ರಿಸ್ತನೇ ದೇವರು ಎಂದು ಇನ್ನೂ ಕೆಲವು ವಚನಗಳು ಸೂಚಿಸುತ್ತವೆ. ಮತ್ತಾಯ 1:23; 2:11; 3:17; 10:37; 11:27; 12:8; 14:33; 18:20; 22:41-45; 28:17,19,20; ಯೋಹಾನ 5:17-26; 8:19; 9:38; 10:30-33; 11:25; 14:7,10,23; 17:1-5; ಅಪೊ 3:14-15; ರೋಮಾ 1:7; 8:9-10; 1 ಕೊರಿಂಥ 8:6; 2 ಕೊರಿಂಥ 4:4; 13:14; ಎಫೆ 3:17-19; ಕೊಲೊ 1:15-17; 2:9; 1 ಥೆಸ 1:1; 1 ತಿಮೊ 1:1; 3:16; ಇಬ್ರಿ 1:3,10,12; 1 ಪೇತ್ರ 3:15; 1 ಯೋಹಾನ 1:3; 2:22; ಪ್ರಕ 1:4-5,8 (ಇದರೊಂದಿಗೆ ಪ್ರಕ 22:12-13); ಪ್ರಕ 1:17; 5:8,13,14; 19:16; 21:6 ನೋಡಿರಿ. ಯೆಹೋವನಾಗಿರುವ (ಹಳೆಯ ಒಡಂಬಡಿಕೆಯಲ್ಲಿ ದೇವರ ಹೆಸರು) ಆತನು ಮಾನವನಾಗಿ ಬಂದನು ಎಂದು ಇನ್ನೂ ಕೆಲವು ವಚನಗಳು ಪ್ರಕಟಿಸುತ್ತವೆ. ವ 10,11 ಮತ್ತು ಲೂಕ 2:11 ನೋಡಿರಿ.

*"ದೇವರಿಗೆ ಸರಿಸಮಾನನಾಗಿರುವದೆಂಬ ಅಮೂಲ್ಯ ಪದವಿಯನ್ನು ಬಿಡಲೊಲ್ಲೆನು ಎಂದೆಣಿಸದೆ"*– ಇಲ್ಲಿನ ಗ್ರೀಕ್ ಪದಗಳನ್ನು ವಿವಿಧ ರೀತಿಯಲ್ಲಿ ಭಾಷಾಂತರ ಮಾಡಲಾಗಿದೆ. ಉದಾಹರಣೆಗೆ, "ದೇವರೊಂದಿಗೆ ಸರಿಸಮಾನನಾಗಿರುವ ಪದವಿಯ ಬಗ್ಗೆ ಆಲೋಚಿಸಲಿಲ್ಲ", "ದೇವರೊಂದಿಗಿನ ತನ್ನ ಸರಿಸಮಾನ ಪದವಿಯನ್ನು ಬಿಡಬಾರದೆಂದು ಯೋಚಿಸಲಿಲ್ಲ".

ಗ್ರೀಕ್ ಪದದ ಸರಿಯಾದ ಅರ್ಥವನ್ನು ವ್ಯಕ್ತಪಡಿಸಲು ಕಷ್ಟ ಎಂಬದರಲ್ಲಿ ಯಾವುದೇ ಅನುಮಾನವಿಲ್ಲ. "ಬಿಡಲೊಲ್ಲೆನು" ಎಂಬದಾಗಿ ಭಾಷಾಂತರ ಮಾಡಲಾಗಿರುವ ಪದ ಗ್ರೀಕ್ ಕ್ರಿಯಾಪದಗಳಾಗಿರುವ "ಹಿಡಿದುಟ್ಟುಕೊಳ್ಳುವದು" ಅಥವಾ "ಒತ್ತಾಯದಿಂದ ತೆಗೆದುಕೊಳ್ಳುವದು" ಎಂಬ ಅರ್ಥವನ್ನು ಕೊಡುತ್ತವೆ. ಇದು ಹಿಡಿದಿಟ್ಟುಕೊಳ್ಳುವ ಕ್ರಿಯೆ ಅಥವಾ ಹಿಡಿದಿಟ್ಟುಕೊಂಡಿರುವ ವಿಷಯದ ಬಗ್ಗೆ ಮಾತನಾಡುತ್ತದೆ. ಇದು ಏನೇ ಇದ್ದರೂ, ಇಲ್ಲಿ ಬಳಸಲಾಗಿರುವ ಪದ, ಪರಿಸ್ಥಿತಿ ಮತ್ತು ಸತ್ಯವೇದದ ಸಂಪೂರ್ಣ ಬೋಧನೆಯಿಂದ ಕೆಳಗೆ ಕೊಡಲಾಗಿರುವ ವಿಷಯಗಳನ್ನು ನಾವು ಹೇಳಬಹುದು: ಸ್ವಭಾವಗಳು ಮತ್ತು ಮನೋಭಾವನೆಗಳಲ್ಲಿ ತಂದೆಯಾದ ದೇವರು, ಕುಮಾರನಾಗಿರುವ ದೇವರು ಮತ್ತು ಪವಿತ್ರಾತ್ಮನಾಗಿರುವ ದೇವರು ಸಮಾನರಾಗಿದ್ದಾರೆ ಹಾಗೂ ಇವುಗಳಲ್ಲಿ ಅವರಲ್ಲಿ ಯಾರಿಂದಲೂ ಹಿಡಿದಿಟ್ಟುಕೊಳ್ಳಲು ಅಥವಾ ಬಿಟ್ಟುಕೊಡಲು ಆಗುವದಿಲ್ಲ. ಹೀಗಿರುವಾಗ, ಯೇಸು ಕ್ರಿಸ್ತನಿಗೆ ತನ್ನನ್ನು ದೇವರಿಗೆ ಸರಿಸಮಾನನು ಎಂಬದಾಗಿ ಆಲೋಚಿಸುವದು ಖಂಡಿತವಾಗಿಯೂ ಕಳ್ಳತನವಲ್ಲ. ಆದರೆ ತ್ರಯೇಕತ್ವದಲ್ಲಿರುವ ಮೂವರು ಸದಸ್ಯರು ಸಮನಾದ ಸ್ಥಾನಗಳಲ್ಲಿ ಇಲ್ಲ. ತಂದೆಗೆ ಉನ್ನತವಾದ ಸ್ಥಾನ. ಯೋಹಾನ 5:19-23; 14:28; 1 ಕೊರಿಂಥ 15:27-28 ನೋಡಿರಿ. ದೇವಕುಮಾರನಾಗಿರುವ ಯೇಸು ಕ್ರಿಸ್ತನು ತಂದೆಯಾದ ದೇವರೊಂದಿಗೆ ಸಮನಾದ ಸ್ಥಾನವನ್ನು ಹಿಡಿದಿಟ್ಟುಕೊಳ್ಳಲು ಬಯಸಲಿಲ್ಲ. ಬದಲು ವಿರುದ್ಧವಾಗಿ ನಡೆದುಕೊಂಡನು. ತಂದೆಯು ತಂದೆಯಾಗಿರಲು ಮತ್ತು ತಂದೆಗೆ ವಿಧೇಯನಾಗಿ ತಾನು ಮಗನಾಗಿರಲು ಆತನು ಸಂತೋಷವುಳ್ಳವನಾಗಿದ್ದನು – ವ 8; ಯೋಹಾನ 4:34; 6:30; 6:38; 8:29; 9:4; 14:31; 15:10; 17:4. ಕುಮಾರನು ಈ ಲೋಕಕ್ಕೆ ಬರುವ ಮೊದಲು ತಂದೆ ಮತ್ತು ಕುಮಾರನ ನಡುವೆ ಇರುವ ವ್ಯತ್ಯಾಸವನ್ನು ಈ ವಾಕ್ಯಗಳಲ್ಲಿ ಸ್ಪಷ್ಟವಾಗಿ ತೋರಿಸಲಾಗಿರುವದನ್ನು ಗಮನಿಸಿರಿ. 7

**2:7** *"ತನ್ನನ್ನು ಬರಿದು ಮಾಡಿಕೊಂಡನು"*– ಇಲ್ಲಿರುವ ಗ್ರೀಕ್ ಪದವನ್ನು ಸಹ ವಿವಿಧ ರೀತಿಯಲ್ಲಿ ಭಾಷಾಂತರ ಮಾಡಲಾಗಿದೆ. ಉದಾಹರಣೆಗೆ, "ತನ್ನನ್ನು ಶೂನ್ಯನನ್ನಾಗಿ ಮಾಡಿಕೊಂಡನು", ಅಥವಾ "ತನ್ನನ್ನು ಏನೂ ಇಲ್ಲದವನನ್ನಾಗಿ ಮಾಡಿಕೊಂಡನು". ಗ್ರೀಕ್ ಕ್ರಿಯಾಪದವು "ಬರಿದು ಮಾಡಿಕೊಂಡನು" ಎಂಬ ಅರ್ಥವನ್ನು ಕೊಡುತ್ತದೆ ಆದರೆ ಇದನ್ನು ಇಲ್ಲಿ ಯಾವ ರೀತಿ ಉಪಯೋಗಿಸಲಾಗಿದೆ ಎಂಬ ವಿಷಯವನ್ನು ತಪ್ಪಾಗಿ ಅರ್ಥಮಾಡಿಕೊಳ್ಳಬಾರದು. ನಂತರದಲ್ಲಿರುವ ಮಾತುಗಳಲ್ಲಿ ಅರ್ಥವನ್ನು ಸ್ಪಷ್ಟವಾಗಿ

ಕೊಡಲಾಗಿದೆ. ಯೇಸು ಕ್ರಿಸ್ತನು ತನ್ನ ದೈವತ್ವವನ್ನು ಬರಿದುಮಾಡಿಕೊಳ್ಳಲಿಲ್ಲ – ಅದು ಅಸಾಧ್ಯವಾದ ಕಾರ್ಯವಾಗಿದೆ. ಆತನು ಭೂಲೋಕಕ್ಕೆ ಬಂದಾಗ ದೇವರಾಗಿರುವದನ್ನು ನಿಲ್ಲಿಸಲಿಲ್ಲ. ಬದಲಾಗಿ ತಂದೆಯೊಂದಿಗೆ ತನಗಿದ್ದ ಪ್ರಭಾವವನ್ನು ಬರಿದು ಮಾಡಿಕೊಂಡನು (ಯೋಹಾನ 17:5), ದೇವರ ಒಬ್ಬನೇ ಮಗನಾಗಿ ತನಗಿದ್ದ ಹಕ್ಕುಗಳು ಮತ್ತು ಸೌಕರ್ಯಗಳನ್ನು ತ್ಯಜಿಸಿದನು. ಆತನು ಪರಲೋಕದಲ್ಲಿ ತನಗಿದ್ದ ಎಲ್ಲಾ ಪ್ರಭಾವನ್ನು ಬದಿಗೊತ್ತಿದನು (2 ಕೊರಿಂಥ 8:9). ಏನೂ ಇಲ್ಲದ ಸಾಮಾನ್ಯನು ಎಂದು ಜನರು ತನ್ನ ಬಗ್ಗೆ ಮಾತನಾಡುವ ಸ್ಥಿತಿಗೆ ಆತನು ತನ್ನನ್ನು ಬರಿದು ಮಾಡಿಕೊಂಡನು. ಮಾನವರನ್ನು ಉಂಟು ಮಾಡಿದಾತನು ಮಾನವರಿಂದಲೇ ತಿರಸ್ಕರಿಸಲ್ಪಡಲು ಮತ್ತು ತಳ್ಳಲ್ಪಡಲು ಬಯಸುವವನಾದನು – ಯೋಹಾನ 1:10-11; ಯೆಶಾಯ 53:3; ಮತ್ತಾಯ 8:20; 12:24; ಮಾರ್ಕ 6:3; ಯೋಹಾನ 18:30. "ತನ್ನನ್ನು ಬರಿದು ಮಾಡಿಕೊಂಡನು" –ಎಂಬದು ಉನ್ನತವಾದ ಪ್ರಭಾವ ಮತ್ತು ಶಕ್ತಿಯಿಂದ ಕೆಳಗಿಳಿದು ಭೂಲೋಕದಲ್ಲಿ ಮಾನವರ ನಡುವೆ ದೀನ ಸ್ಥಿತಿಗೆ ಬಂದದ್ದನ್ನು ವಿವರಿಸುವದಾಗಿದೆ.

*"ದಾಸನು"*– ರೋಮಾ 15:8; ಯೋಹಾನ 13:3-5; ಲೂಕ 22:27; ಮತ್ತಾಯ 20:28.

*"ರೂಪ"*– ಯೋಹಾನ 1:14; ರೋಮಾ 8:3; ಇಬ್ರಿ 2:14. ಯೇಸು ಕ್ರಿಸ್ತನು ನಿಜವಾದ ಮಾನವ ಸ್ವಭಾವವಿರುವ ವ್ಯಕ್ತಿ ಮತ್ತು ದೇವರು. 8

**2:8** *"ಕಾಣಿಸಿಕೊಂಡರೂ"*– ಬಾಹ್ಯವಾಗಿ ಯೇಸು ಕ್ರಿಸ್ತನು ಇತರೆ ಮನುಷ್ಯರ ಹಾಗೆ ಮನುಷ್ಯನ ಹಾಗೆಯೇ ಇದ್ದನು, ಮನುಷ್ಯನಲ್ಲದೆ ಬೇರೆ ಏನೂ ಆಗಿರಲಿಲ್ಲ. ಭೂಲೋಕಕ್ಕೆ ಬರುವ ಮೊದಲು ಆತನಿಗಿದ್ದ ದೈವೀಕ ಸ್ವಭಾವ ಮತ್ತು ಪ್ರಭಾವಗಳು ಮಾನವನ ಕಣ್ಣುಗಳಿಗೆ ಮರೆಯಾಗಿದ್ದವು.

*"ತನ್ನನ್ನು ತಗ್ಗಿಸಿಕೊಂಡನು"*– ಇದು ಆತನ ಜೀವನಪರ್ಯಂತರ ಸತ್ಯವಾಗಿದ್ದ ವಿಷಯವಾಗಿದೆ (ಮತ್ತಾಯ 11:29), ಆದರೆ ಆತನ ದೀನತೆಯು ಆತನ ಮರಣದ ಸಮಯದಲ್ಲಿ ಅತ್ಯಂತ ವಿವರವಾಗಿ ಕಾಣಿಸಿಕೊಂಡಿತು – ಯೆಶಾಯ 53:7-8; 1 ಪೇತ್ರ 2:23-24. ಆತನು ದೇವಕುಮಾರನಾಗಿ ತನ್ನ ಹಕ್ಕುಗಳಿಗಾಗಿ ಹೋರಾಡಲಿಲ್ಲ, ತನ್ನ ಮೇಲೆ ಸುಳ್ಳು ಆರೋಪಗಳನ್ನು ಮಾಡಿದ, ತನ್ನೊಂದಿಗೆ ಕೆಟ್ಟದಾಗಿ ನಡೆದುಕೊಂಡ ಮತ್ತು ತನ್ನನ್ನು ಸಾಯಿಸಿದವರನ್ನು ಹೆಮ್ಮೆಯಿಂದ ತಡೆಯಲಿಲ್ಲ.

*“ವಿಧೇಯನಾದನು”*– ಅಂದರೆ ತಂದೆಯಾದ ದೇವರಿಗೆ ವಿಧೇಯನಾದನು – ಮತ್ತಾಯ 26:39; ಯೋಹಾನ 18:11; ರೋಮಾ 5:19; ಇಬ್ರಿ 10:7; ಯೋಹಾನ 10:17-18.

*“ಶಿಲುಬೆ”*– ಪೌಲನು “ಶಿಲುಬೆಯ ಮರಣವನ್ನಾದರೂ” ಎಂದು ಹೇಳಿದ್ದಾನೆ ಯಾಕಂದರೆ ಶಿಲುಬೆಯ ಮರಣ ಅತ್ಯಂತ ಘೋರವಾದ ಮರಣವಾಗಿತ್ತು. ರೋಮನ್ನರು ಅಪರಾಧಿಗಳನ್ನು ಜನರೆದುರಿನಲ್ಲಿ ಶಿಲುಬೆಗೆ ಜಡಿಯುತ್ತಾ ಇದ್ದರು. 9

**2:9** *“ಈ ಕಾರಣದಿಂದ”*– ಆತನ ತ್ಯಾಗ, ದೀನತೆ ಮತ್ತು ವಿಧೇಯತೆಗೆ ದೇವರು ತಕ್ಕ ಪ್ರತಿಫಲವನ್ನು ನೀಡಿದನು. ಇದು ಕರ್ತನಾದ ಯೇಸು ಕ್ರಿಸ್ತನು ತಾನೇ ಮತ್ತಾಯ 23:12 ರಲ್ಲಿ ಮಾಡಿದ ಬೋಧನೆಗನುಸಾರವಾಗಿದೆ.

*“ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿದನು”*– ಅಪೊ 2:33; ಎಫೆ 1:20-21; ಇಬ್ರಿ 1:3; ಪ್ರಕ 3:21. ಯೇಸು ಕ್ರಿಸ್ತನ ಹಾಗೆ ಯಾವೊಬ್ಬನು ತನ್ನನ್ನು ತಗ್ಗಿಸಿಕೊಂಡಿಲ್ಲ, ಆತನಷ್ಟು ಉನ್ನತಕ್ಕೆ ಯಾವೊಬ್ಬನೂ ಏರಿಸಲ್ಪಟ್ಟಿಲ್ಲ. ಆತನಿಗೆ ಅತ್ಯುನ್ನತ ಸ್ಥಾನ ಕೊಡಲ್ಪಟ್ಟಿದೆ ಯಾಕಂದರೆ ಆತನು ಮಾತ್ರವೇ ಅದಕ್ಕೆ ಅರ್ಹನಾಗಿದ್ದಾನೆ.

*“ಹೆಸರು”*– ಎಲ್ಲದಕ್ಕಿಂತ ಉನ್ನತವಾದ ಈ ಹೆಸರು ಏನು – “ಯೇಸು” (ವ 10), ಅಥವಾ “ಕರ್ತನು” (ವ 11)? ಪೌಲನು ಬಹುಶಃ “ಕರ್ತನು” ಪದವನ್ನು ಸೂಚಿಸುತ್ತಾ ಇದ್ದಾನೆ ಯಾಕಂದರೆ ತಂದೆ ತನ್ನ ಮಗನನ್ನು ದೀನತೆ ಮತ್ತು ಮರಣದ ಸ್ಥಾನದಿಂದ ಉನ್ನತಕ್ಕೆ ಏರಿಸುವ ಮೊದಲೇ ಯೇಸು ಎಂಬ ಹೆಸರನ್ನು ಕೊಟ್ಟಿದ್ದನು ಹಾಗೂ ಯೇಸು ಕ್ರಿಸ್ತನನ್ನು ಘನಪಡಿಸುವ ಸಮಯದಲ್ಲಿ ದೇವರು ಯೇಸು ಕ್ರಿಸ್ತನಿಗೆ ಕೊಟ್ಟ ಹೆಸರನ್ನು ಪೌಲನು ಸೂಚಿಸುತ್ತಾ ಇದ್ದಾನೆ. ಅಪೊ 2:36 ರೊಂದಿಗೆ ಹೋಲಿಸಿ ನೋಡಿರಿ. “ಹೆಸರು” ಅಧಿಕಾರವನ್ನು ಸೂಚಿಸುತ್ತದೆ. ಯೋಹಾನ 14:13-14 ರೊಂದಿಗೆ ಹೋಲಿಸಿ ನೋಡಿರಿ. ಇದನ್ನು “ಶೀರ್ಷಿಕೆ” ಎಂಬ ಅರ್ಥದಲ್ಲಿಯೂ ಉಪಯೋಗಿಸಬಹುದು – ಯೆಶಾಯ 9:6. 11

**2:11** *“ಪ್ರತಿಜ್ಞೆ”*– ಯೇಸು ಕ್ರಿಸ್ತನು ಭೂಪರಲೋಕಗಳಲ್ಲಿ ಎಲ್ಲಾ ಅಧಿಕಾರವಿರುವ ಸರ್ವಶಕ್ತನಾದ ಕರ್ತನು ಎಂದು ವಿಶ್ವಾಸಿಗಳು ಈ ಸಂತೋಷದಿಂದ ಪ್ರತಿಜ್ಞೆ ಮಾಡಬಹುದು. ಎಲ್ಲರೂ ಇದನ್ನು ಸ್ವೇಚ್ಛೆಯಿಂದ ಅಥವಾ ಸ್ವೇಚ್ಛೆಯಿಲ್ಲದೆ ಪ್ರತಿಜ್ಞೆ ಮಾಡುವ ಸಮಯ ಬಂದೇ ಬರುತ್ತದೆ.

*“ಕರ್ತನು”*– ಇಲ್ಲಿ “ಕರ್ತನು” ಎಂಬದಾಗಿ (ಕುರಿಯೊಸ್) ಎಂಬ ಗ್ರೀಕ್ ಪದವನ್ನು

ಭಾಷಾಂತರ ಮಾಡಲಾಗಿದೆ, ಹಳೆಯ ಒಡಂಬಡಿಕೆಯಲ್ಲಿ ಯೆಹೋವ ಎಂಬದಾಗಿ ಕರೆಯಲ್ಪಡುತ್ತಿದ್ದ ದೇವರ ಹೆಸರನ್ನು ಸೂಚಿಸಲು ಈ ಪದವನ್ನು ಬಳಸಲಾಗಿದೆ (ಲೂಕ 2:11; ವಿಮೋ 3:14-15 ನೋಡಿರಿ). ಆತನ ಎದುರು ಮಾತ್ರವೇ ಎಲ್ಲರೂ ಮೊಣಕಾಲೂರುವರು – ಯೆಶಾಯ 45:22-24; ಮತ್ತಾಯ 4:10. ತಂದೆಯಾದ ದೇವರು ಯೇಸು ಕ್ರಿಸ್ತನಿಗೆ ಈ ಹೆಸರನ್ನು, ಶೀರ್ಷಿಕೆಯನ್ನು ಕೊಟ್ಟಿದ್ದಾನೆ. ಅಂದರೆ, ಯೇಸು ಕ್ರಿಸ್ತನು, ಮಹಾದೇವನಾದ ಯೆಹೋವನಾಗಿದ್ದರೂ ಈ ಲೋಕಕ್ಕೆ ಬಂದು ಮರಣವನ್ನು ಅನುಭವಿಸಿದನು, ಆತನು ಈ ಜಗತ್ತಿಗೆ ಕರ್ತನು (ಅಪೊ 2:36; 1 ಕೊರಿಂಥ 8:6; ಮತ್ತಾಯ 28:18) ಮತ್ತು ಆರಾಧನೆಗೆ ಯೋಗ್ಯನು ಎಂದು ಅವನು ಇಡೀ ಜಗತ್ತಿಗೆ ಪ್ರಕಟಿಸಿದ್ದಾನೆ. ಯೇಸು ಕ್ರಿಸ್ತನೇ ಯೆಹೋವನಾಗಿದ್ದಾನೆ ಎಂದು ಹೇಳುವ ಇತರೆ ವಚನಗಳನ್ನು ಲೂಕ 2:11 ರಲ್ಲಿ ನೋಡಿರಿ.

*"ತಂದೆಯಾದ ದೇವರ ಪ್ರಭಾವ"*– ಯೇಸು ಕ್ರಿಸ್ತನನ್ನು ಮಹಿಮೆಪಡಿಸುವಾಗ ಮತ್ತು ಕರ್ತನೆಂದು ಪ್ರತಿಜ್ಞೆ ಮಾಡಿಕೊಳ್ಳುವಾಗ ತಂದೆಗೆ ಮಹಿಮೆ ಉಂಟಾಗುತ್ತದೆ. ಯೋಹಾನ 5:23; 1 ಯೋಹಾನ 2:23 ರೊಂದಿಗೆ ಹೋಲಿಸಿ ನೋಡಿರಿ. 12

2:12 *"ಹೀಗಿರುವಲ್ಲಿ"*– ಮೇಲೆ ತಿಳಿಸಲಾಗಿರುವ ಸತ್ಯದ ಬೆಳಕಿನಲ್ಲಿ.

*"ವಿಧೇಯರಾಗಿರಿ"*– ಅವನ ಮಾತಿನ ಅರ್ಥ ಅವರು ದೇವರು ಪ್ರಕಟಿಸಿದ ಸತ್ಯಕ್ಕೆ ವಿಧೇಯರಾದರು (ರೋಮಾ 6:17; 1 ಪೇತ್ರ 1:22). ಇದು ಬಹಳ ಪ್ರಾಮುಖ್ಯವಾದ ಸಂಗತಿಯಾಗಿದೆ – ಯಾಕೋಬ 1:22-25. ಯೇಸು ಕ್ರಿಸ್ತನು ದೇವರಿಗೆ ವಿಧೇಯನಾಗಿದ್ದನು – ವ 8. ಹೀಗೆಯೇ ಪೌಲನು ಇರಲಿ ಅಥವಾ ಇಲ್ಲದೆ ಇರಲಿ ಅವರೂ ವಿಧೇಯರಾಗಿ ನಡೆದುಕೊಳ್ಳಬೇಕು. ನಾವೂ ಹೀಗೆಯೇ ನಡೆದುಕೊಳ್ಳಬೇಕು.

*"ಸಾಧಿಸಿಕೊಳ್ಳಿರಿ"*– ಪೌಲನು "ನಿಮ್ಮ ರಕ್ಷಣೆಗಾಗಿ ಕಾರ್ಯಗಳನ್ನು ಸಾಧಿಸಿಕೊಳ್ಳಿರಿ" ಎಂದು ಪೌಲನು ಹೇಳುತ್ತಿಲ್ಲ. ಒಳ್ಳೆಯ ಕ್ರಿಯೆಗಳು ಮತ್ತು ಮಾನವ ಪರಿಶ್ರಮದಿಂದ ರಕ್ಷಣೆಯನ್ನು ಸಂಪಾದಿಸಿಕೊಳ್ಳಲು ಅಗುವದಿಲ್ಲ ಎಂಬದನ್ನು ಆತನು ಬಲ್ಲವನಾಗಿದ್ದನು – ಎಫೆ 2:8-9; ರೋಮಾ 3:28; 4:4-5; 6:23; 11:6. ಅವನು ಹೇಳುತ್ತಾ ಇರುವದೇನೆಂದರೆ ವಿಶ್ವಾಸಿಗಳು ಈಗಾಗಲೇ ತಮ್ಮ ಜೀವಿತದಲ್ಲಿರುವ ರಕ್ಷಣೆಯನ್ನು ಉಳಿಸಿಕೊಳ್ಳಲು ಕಾರ್ಯವನ್ನು ಮಾಡಬೇಕು. ಯೇಸು ಕ್ರಿಸ್ತನಲ್ಲಿದ್ದ ಮನಸ್ಸು ಅವರಲ್ಲಿಯೂ ಇರಬೇಕು

ಮತ್ತು ತಮ್ಮ ಜೀವಿತದ ಎಲ್ಲಾ ಭಾಗಗಳಿಗೆ ಅವರು ಸತ್ಯವನ್ನು ಅಳವಡಿಸಿಕೊಳ್ಳಬೇಕು.

*"ಮನೋಭೀತಿಯಿಂದ ನಡಗುವವರಾಗಿ"*– ಯೆಶಾಯ 66:2; ಯೆರೆ 5:22. ಕಾರ್ಯವು ಅತ್ಯಂತ ಪ್ರಾಮುಖ್ಯವಾಗಿದೆ ಮತ್ತು ನಿತ್ಯವಾದ ಪ್ರಭಾವಗಳನ್ನು ಹೊಂದಿದೆ; ಇದರ ಅರ್ಥ ಜಗತ್ತಿನ ದೇವರೊಂದಿಗೆ ಕಾರ್ಯಮಾಡುವದಾಗಿದೆ. ಆದ್ದರಿಂದ ಭಯಭಕ್ತಿ, ಮನೋಭೀತಿ ಮತ್ತು ನಡಗುವಿಕೆಯನ್ನು ಇದು ಬೇಡುತ್ತದೆ. ಆದಿ 20:11; ಯೋಬ 28:28; ಕೀರ್ತನೆ 34:11-14; 111:10; ಜ್ಞಾನೋ 1:7 ರಲ್ಲಿ ದೇವರ ಭಯದ ಕುರಿತಾದ ನೋಟ್ ನೋಡಿರಿ. **13**

**2:13** *"ದೇವರು . . . ನಿಮ್ಮಲ್ಲಿ ಕಾರ್ಯಮಾಡುತ್ತಾ ಇದ್ದಾನೆ"*– 1:6; ಎಫೆ 2:10 ನೋಡಿರಿ. ದೇವರು ವಿಶ್ವಾಸಿಗಳಲ್ಲಿ ಕಾರ್ಯಮಾಡುವದರಿಂದ ನಮಗೆ ಯಾವುದೇ ಕೆಲಸವಿಲ್ಲ ಎಂದು ನಾವು ಯೋಚಿಸಬಾರದು. ಬದಲಾಗಿ ಆತನು ನಮಗೆ ಕೊಟ್ಟಿರುವ ಆಂತರಿಕ ಆತ್ಮೀಕ ಜೀವದನುಸಾರ ಜೀವಿಸುತ್ತಾ ಕಾರ್ಯವನ್ನು ಮಾಡಬೇಕು. ನಾವು ಕೈಗೊಂಬೆಗಳು ಅಥವಾ ರೊಬೊಟ್ ಗಳಲ್ಲ. ದೇವರು ನಮ್ಮಲ್ಲಿ ಸಕ್ರಿಯನಾಗಿದ್ದಾನೆ. ಆತನು ಒಳ್ಳೆಯ ಗುರಿಯ ಕಡೆಗೆ ನಮ್ಮನ್ನು ಮುನ್ನಡೆಸುತ್ತಾ ಇದ್ದಾನೆ – ನಾವು ಹೆಚ್ಚೆಚ್ಚು ಯೇಸು ಕ್ರಿಸ್ತನಂತಾಗಬೇಕೆಂದು ಆತನು ಬಯಸುತ್ತಾನೆ (ರೋಮಾ 8:29). ಅತ್ಯಂತ ಪ್ರಾಮುಖ್ಯವಾದ ಈ ಕಾರ್ಯದಲ್ಲಿ ನಾವು ಆತನೊಂದಿಗೆ ಸಹಕರಿಸಬೇಕು. **14-16**

**2:14-16** ಇದು ಎರಡು ಗಂಭೀರವಾದ ಪಾಪಕಾರ್ಯಗಳನ್ನು ನೋಡಬಹುದು – ದೇವರಿಗೆ ಮತ್ತು ಆತನು ನೇಮಿಸಿರುವ ನಾಯಕರಿಗೆ ವಿರುದ್ಧವಾಗಿ ಗುಣಗುಟ್ಟುವದು (ವಿಮೋ 16:2-8; ಸಂಖ್ಯಾ 11:1), ಹಾಗೂ ಒಬ್ಬರೊಂದಿಗೊಬ್ಬರು ಜಗಳವಾಡುವದು (ರೋಮಾ 14:1-4; 1 ಕೊರಿಂಥ 3:3-4). ಹೀಗೆ ನಡೆದುಕೊಳ್ಳುವ ಬದಲು, ವಿಶ್ವಾಸಿಗಳು ಯೇಸು ಕ್ರಿಸ್ತನಂತಾಗಬೇಕು. ಆತ ಮಾತ್ರವೇ ನಾವು "ನಿಷ್ಕಳಂಕರಾಗಿರಲು" (1 ಥೆಸ 2:10; 5:23; ಮತ್ತಾಯ 10:16; 2 ಕೊರಿಂಥ 11:2) ಮತ್ತು "ನಿರ್ದೋಷಿಗಳಾಗಿರಲು" (ಮತ್ತಾಯ 5:48) ಸಾಧ್ಯವಾಗುತ್ತದೆ. **15**

**2:15** *"ವಕ್ರಬುದ್ಧಿಯುಳ್ಳ ಮೂರ್ಖಜಾತಿ"*– ಮತ್ತಾಯ 17:17; ಅಪೊ 2:40; ಗಲಾ 1:4; ಎಫೆ 2:1-3; 4:17-19. ಪ್ರತಿಯೊಂದು ಸಂತತಿಯೂ ವಕ್ರಬುದ್ಧಿಯುಳ್ಳದ್ದಾಗಿದೆ, ಮೂರ್ಖತನಕ್ಕೆ ಒಳಗಾಗಿದೆ ಆದರೆ ಕೆಲವರು ಹಿಂದಿನವರಿಗಿಂತ ಹೆಚ್ಚಿನವರಾಗಿರುತ್ತಾರೆ.

*“ಹೊಳೆಯುವ ಜ್ಯೋತಿರ್ಮಂಡಲಗಳು”*– ಮತ್ತಾಯ 5:14-16. **16**

**2:16** *“ಜೀವದಾಯಕ ವಾಕ್ಯ”*– ನಂಬುವವರಿಗೆ ಆತ್ಮೀಕ ಜೀವವನ್ನು ಕೊಡಲು ದೇವರು ತನ್ನ ವಾಕ್ಯವನ್ನು ಉಪಯೋಗಿಸುತ್ತಾನೆ (ಯಾಕೋಬ 1:18; 1 ಪೇತ್ರ 1:23).

*“ವ್ಯರ್ಥವಲ್ಲ”*– ಒಂದುವೇಳೆ ಅವರು ಜೀವಿಸಬೇಕಾದ ರೀತಿಯಲ್ಲಿ ಜೀವಿಸಿದರೆ (ಅಲ್ಲಿನ ಸಭೆಯ ಸ್ಥಾಪಕನು ಮತ್ತು ಬೋಧಕನು) ಯೇಸು ಕ್ರಿಸ್ತನು ಹಿಂದಿರುಗಿ ಬರುವ ಸಮಯದಲ್ಲಿ ಅವರ ವಿಷಯವಾಗಿ ಹೆಮ್ಮೆಪಡುವನು. ಗಲಾ 4:11; 1 ಥೆಸ 2:19-20 ರೊಂದಿಗೆ ಹೋಲಿಸಿ ನೋಡಿರಿ. **17**

**2:17** *“ಪಾನದ್ರವ್ಯ”*– ವಿಮೋ 29:40 ನೋಡಿರಿ. ಪೌಲನು ಮರಣದ ಸಾಧ್ಯತೆ ಮತ್ತು ಬಹುಶಃ ಹಿಂಸೆಯ ಮರಣದ ಬಗ್ಗೆ ಮಾತನಾಡುತ್ತಾ ಇದ್ದಾನೆ ಎಂಬದಾಗಿ ಅನ್ನಿಸುತ್ತದೆ (2 ತಿಮೊ 4:6).

*“ನಂಬಿಕೆ”*– ಯೇಸು ಕ್ರಿಸ್ತನಲ್ಲಿ ಅವರಿಗಿದ್ದ ನಂಬಿಕೆ ಪೌಲನಿಗೆ (ಮತ್ತು ಇತರರಿಗೆ – 4:14-16; 2 ಕೊರಿಂಥ 8:1-4) ಪ್ರೀತಿಯಿಂದ ಸೇವೆ ಮಾಡುವಂತೆ ಮಾಡಿತ್ತು. ಇದು ಯಜ್ಞಾರ್ಪಣೆಯ ರೀತಿಯದ್ದಾಗಿತ್ತು (4:18; ಇಬ್ರಿ 13:16 ನೋಡಿರಿ). ಒಂದುವೇಳೆ ದೇವರ ಸೇವೆಯಲ್ಲಿ ಪ್ರಾಣ ಕೊಡಬೇಕಾಗಿ ಬಂದರೆ ಮತ್ತು ಯಜ್ಞದ ರೀತಿಯಲ್ಲಿ ದೇವರಿಗೆ ಅರ್ಪಿತವಾಗಬೇಕಾದರೆ ಅವನು ಸಂತೋಷಿಸುವವನಾಗಿದ್ದನು. ಮತ್ತು ಒಂದುವೇಳೆ ಕಾರ್ಯಗಳು ಹೀಗೆಯೇ ನಡೆದರೆ ಅವರೂ ಸಂತೋಷಿಸಬೇಕು. **19**

**2:19** *“ತಿಮೊಥೆ”*– 1:1; 1 ಕೊರಿಂಥ 4:17; 16:10; 1 ಥೆಸ 3:2. **20**

**2:20** *“ಯಥಾರ್ಥವಾಗಿರುವವನು”*– ಅಂದರೆ ಆ ಸಮಯದಲ್ಲಿ ಅವನಿದ್ದ ಸ್ಥಳದಲ್ಲಿ ಅವನೊಂದಿಗೆ ಯಾರೂ ಇರಲಿಲ್ಲ ಎಂಬದಾಗಿದೆ. ಫಿಲಿಪ್ಪಿಯಲ್ಲಿ ಸೇವೆ ಪ್ರಾರಂಭವಾದ ಸಮಯದಲ್ಲಿ ತಿಮೊಥೆಯನು ಪೌಲನೊಂದಿಗೆ ಇದ್ದನು – ಅಪೊ 16 ನೇ ಅಧ್ಯಾಯ. **21**

**2:21** ಲೋಕದಲ್ಲಿ ಮತ್ತು ಸಹಜವಾಗಿ ಕ್ರೈಸ್ತರ ನಡುವೆಯೂ ಕಾರ್ಯಗಳ ಸ್ಥಿತಿ ಇದುವೇ ಆಗಿದೆ. **22**

**2:22** *“ಮಗನು”*– ಪೌಲನು ಆತ್ಮೀಕ ವಿಷಯಗಳಲ್ಲಿ ತಿಮೊಥೆಯನನ್ನು ತನ್ನ ಮಗನೆಂದು ನೆನೆಸುತ್ತಿದ್ದನು – 1 ತಿಮೊ 1:2. 1 ಕೊರಿಂಥ 4:14-15; ಗಲಾ 4:19; 1 ಥೆಸ 2:11

ರೊಂದಿಗೆ ಹೋಲಿಸಿ ನೋಡಿರಿ. **23-24**

- **2:23-24** 1:25-26 ನೋಡಿರಿ. **25**

**2:25** *"ಸಹೋದರ"*– ಆತ್ಮೀಕ ವಿಷಯಗಳಲ್ಲಿ, ಜೊತೆಯಲ್ಲಿರುವ ವಿಶ್ವಾಸಿ.

*"ಕಷ್ಟಕಾಲದಲ್ಲಿ ಜೊತೆಯಲ್ಲಿರುವವನು"*– ದೇವರ ಕೆಲಸದಲ್ಲಿ (1 ಕೊರಿಂಥ 3:9).

*"ಸಹ ಭಟನು"*– 2 ತಿಮೊ 2:3-4; ಎಫೆ 6:11.

*"ನನ್ನ ಕೊರತೆಗಳು"*– 4:18. ಬಹುಶಃ ಎಪಫ್ರೋದಿತನು, ಪೌಲನಿಗಾಗಿ ಹಣದ ಕಾಣಿಕೆಯನ್ನು ತಂದ ನಂತರ, ಸೆರೆಮನೆಯಲ್ಲಿಯೂ ವಿವಿಧ ರೀತಿಯಲ್ಲಿ ಸಹಾಯ ಮಾಡಿರಬಹುದು. **26**

**2:26** *"ಹಂಬಲ"*– 1:7-8.

*"ಅಸ್ವಸ್ಥತೆ"*– ತನ್ನ ಅಸ್ವಸ್ಥತೆಯನ್ನು ನೆನೆದು ಫಿಲಿಪ್ಪಿಯಲ್ಲಿರುವ ವಿಶ್ವಾಸಿಗಳು ದುಃಖಿಸುವದು ಅವನಿಗೆ ಇಷ್ಟವಿರಲಿಲ್ಲ. **27**

**2:27** *"ಸಾಯುವ ಹಾಗಿದ್ದನು"*– ಅನೇಕ ಜನರನ್ನು ಗುಣಪಡಿಸಿದ್ದಂಥ ಪೌಲನು (ಅಪೊ 19:11-12; 28:8-9) ತನ್ನನ್ನು ಕೂಡಲೇ ಗುಣಪಡಿಸಿಕೊಳ್ಳಲು ಆಗದವನಾಗಿದ್ದನು. ಹಾಗೆಯೇ ಗಲಾ 4:13; 1 ತಿಮೊ 5:23; 2 ತಿಮೊ 4:20 ನೋಡಿರಿ. ಆದರೆ ಕ್ರಮೇಣವಾಗಿ ದೇವರು ಅವನನ್ನು ಗುಣಪಡಿಸಿದನು ("ಅವನನ್ನು ಕರುಣಿಸಿದನು").

*"ದುಃಖ"*– ಸಂತೋಷ ಈ ಪತ್ರಿಕೆಯ ಪ್ರಮುಖವಾದ ಧ್ಯೇಯವಾಗಿದೆ (1:4). ಆದರೆ ಭೂಲೋಕದಲ್ಲಿ ವಿಶ್ವಾಸಿಗಳ ಸಂತೋಷವು ಸಹಜವಾಗಿ ದುಃಖದೊಂದಿಗೆ ಬೆರತಿರುತ್ತದೆ – 2 ಕೊರಿಂಥ 6:10; 1 ಪೇತ್ರ 1:6. **28-30**

**2:28-30** ಪೌಲನು ಸೆರೆಮನೆಯಲ್ಲಿದ್ದಾಗ ಅವನಿಗೆ ಸಹಾಯ ಮಾಡುವ ಸಲುವಾಗಿ ಸಭೆ ಎಫಪ್ರೋದೀತನನ್ನು ಕಳುಹಿಸಿತು. ಆದರೆ ಎಫಪ್ರೋದೀತನು ಕ್ರಿಸ್ತನ ಸೇವೆಯ ನಿಮಿತ್ತ ಅಸ್ವಸ್ಥನಾದನು ಮತ್ತು ಫಿಲಿಪ್ಪಿಯಲ್ಲಿದ್ದ ಸಭೆಗೆ ಹಿಂದಿರುಗಲು ಹಂಬಲಿಸುತ್ತಾ ಇದ್ದನು. ಅಲ್ಲಿದ್ದ ಸಭೆಯ ವಿಶ್ವಾಸಿಗಳು ಅವನು ತನ್ನ ಸೇವೆಯಲ್ಲಿ ವಿಫಲನಾದನು ಮತ್ತು ಪೌಲನು ಕೊರತೆಯಲ್ಲಿರುವ ಸಮಯದಲ್ಲಿ ಅವನನ್ನು ತೊರೆದಿದ್ದಾನೆ ಎಂಬದಾಗಿ ಯೋಚಿಸಿತೇ? ಆದರೆ ಹಾಗೆ ಯೋಚಿಸಬಾರದೆಂದು ಪೌಲನು ಅವರಿಗೆ ಭರವಸೆಯನ್ನು ನೀಡಿದನು. **29**

**2:29** *"ಮಾನ್ಯರೆಂದು ಎಣಿಸಿರಿ"*– ಅಂಥವರು ಭೂಮಿಯ ಮೇಲಿರುವ ಇತರರಿಗಿಂತ ಹೆಚ್ಚು ಮಾನ್ಯರಾಗಿದ್ದಾರೆ ಮತ್ತು ದೇವರೇ ಅವರನ್ನು ಮಾನ್ಯರೆಂದು ಎಣಿಸಿ ಘನಪಡಿಸುವನು – ಯೋಹಾನ 12:26. 30

**2:30** *"ಜೀವದ ಆಶೆಯನ್ನು ಲಕ್ಷ್ಯಮಾಡದೆ"*– ಅಪೊ 20:24; ರೋಮಾ 16:4; 1 ಯೋಹಾನ 3:16.

# 3 1

**3:1** *"ಸಂತೋಷಪಡಿರಿ"*– 1:4; 4:4. ವಿಶ್ವಾಸಿಯು ತನ್ನ ಪರಿಸ್ಥಿತಿಗಳಲ್ಲಿ, ಯಶಸ್ಸುಗಳಲ್ಲಿ, ಆಸ್ತಿ ಐಶ್ವರ್ಯಗಳಲ್ಲಿ, ಲೌಕಿಕ ನಿರೀಕ್ಷೆಗಳಲ್ಲಿ ಸಂತೋಷಪಡದೆ "ಕರ್ತನಲ್ಲಿ ಸಂತೋಷಪಡಬೇಕು". ಹಬಕ್ಕೂಕ 3:17-18 ನೋಡಿರಿ.

*"ನೀವೇ ನನಗೆ ಮಾಡಬೇಕೆಂದಿರುವ ಕಾರ್ಯಗಳು"*– ಬಹುಶಃ ಪೌಲನು ಸಂತೋಷಿಸಿರಿ ಎಂದು ಹೇಳಿರುವ ತನ್ನ ಮಾತುಗಳನ್ನೇ ಸೂಚಿಸುತ್ತಾ ಇರಬಹುದು; ಅಥವಾ ಮುಂದಿನ ವಾಕ್ಯಗಳಲ್ಲಿ ಹೇಳಲಾಗಿರುವ ದುಷ್ಟರ ವಿಷಯದಲ್ಲಿ ಎಚ್ಚರಿಕೆಯನ್ನು ಕೊಡುತ್ತಾ ಇರಬಹುದು – ಹಿಂದೆಯೂ ಅವನು ಅವರಿಗೆ ಇದೇ ರೀತಿಯ ಎಚ್ಚರಿಕೆಗಳನ್ನು ಕೊಟ್ಟಿರಬಹುದು. 2

**3:2** ಪೌಲನು ಇಲ್ಲಿ ಇತರ ಸಭೆಗಳಿಯೂ ಈ ರೀತಿಯ ಜನರ ಬಗ್ಗೆ ಬರೆದಿರುವದರ ಕುರಿತು ಮಾತನಾಡುತ್ತಾ ಇದ್ದಾನೆ – 2 ಕೊರಿಂಥ 11:13-15; ಗಲಾ 1:7; 2:4; 5:12. ಹಾಗೆಯೇ ಅಪೊ 15:1-2,5 ನೋಡಿರಿ.

*"ನಾಯಿಗಳು"*– ಯೆಹೂದ್ಯರು ನಾಯಿಗಳನ್ನು ಅಶುದ್ಧ ಪ್ರಾಣಿಗಳನ್ನು ಪರಿಗಣಿಸುತ್ತಾ ಇದ್ದರು ಮತ್ತು ಅನ್ಯರನ್ನು "ನಾಯಿಗಳೆಂದು" ಕರೆಯುತ್ತಾ ಇದ್ದರು. ಪೌಲನು ಹೇಳುವದೇನೆಂದರೆ ಯೇಸು ಕ್ರಿಸ್ತನನ್ನು ನಿರಾಕರಿಸಿ, ಕ್ರೈಸ್ತರಿಗೆ ತೊಂದರೆ ಕೊಡಲು ಪ್ರಯತ್ನಿಸುವ ಯೆಹೂದ್ಯರೇ ನಿಜವಾದ ನಾಯಿಗಳಾಗಿದ್ದಾರೆ.

*"ದುರ್ಮನಸ್ಸಿನಿಂದ ಕೆಲಸ ಮಾಡುವವರು"*– ಯೇಸು ಕ್ರಿಸ್ತನ ಸುವಾರ್ತೆಯನ್ನು ವಕ್ರಗೊಳಿಸುವದು ಮತ್ತು ಕ್ರೈಸ್ತರನ್ನು ಸತ್ಯದ ಮಾರ್ಗದಿಂದ ತಪ್ಪಿಸಲು ಪ್ರಯತ್ನಿಸುವದು ದೊಡ್ಡ ದುಷ್ಟತನವಾಗಿದೆ. ಇದು ನಿತ್ಯತ್ವಕ್ಕೆ ಸಂಬಂಧಿಸಿದ ಸಂಗತಿಯಾಗಿದೆ.

*“ಅಂಗಚ್ಛೇದನ ಮಾಡುವವರು”*– ಅವನು ಸುನ್ನತಿಯ ಬಗ್ಗೆ ಮಾತನಾಡುತ್ತಾ ಇದ್ದಾನೆ – ಆದಿ 17:10-14. ಕೆಲವು ಯೆಹೂದ್ಯರು ಈ ಪದ್ಧತಿಗೆ ಒಳಗಾಗುವಂತೆ ಅನ್ಯರಿಂದ ಕ್ರೈಸ್ತರಾದವರನ್ನು ಒತ್ತಾಯಪಡಿಸುತ್ತಾ ಇದ್ದರು. ಆತನು ಇಲ್ಲಿ ವ್ಯಂಗ್ಯವನ್ನು ಉಪಯೋಗಿಸಿದ್ದಾನೆ ಯಾಕಂದರೆ ಯೇಸು ಕ್ರಿಸ್ತನ ಸುವಾರ್ತೆಯನ್ನು ವಿರೋಧಿಸುತ್ತಾ ಇದ್ದ ಅಪನಂಬಿಕೆಯುಳ್ಳ ಯೆಹೂದ್ಯರು ಸುನ್ನತಿಯ ನಿಜವಾದ ಅರ್ಥದ ಪ್ರಕಾರ ಜೀವಿಸುತ್ತಾ ಇರಲಿಲ್ಲ (ರೋಮಾ 2:25-29) ಆದ್ದರಿಂದಲೇ ಸುನ್ನತಿಯೆಂಬ ಸಂಸ್ಕಾರವು ಅರ್ಥವಿಲ್ಲದ ಅಂಗಚ್ಛೇದನವಾಗಿತ್ತು. **3**

**3:3** *“ನಾವು”*– ಅವನ ಮಾತಿನ ಅರ್ಥ ಯೆಹೂದ್ಯರಾಗಲಿ ಅನ್ಯರಾಗಲಿ, ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಟ್ಟಿರುವ ವಿಶ್ವಾಸಿಗಳು. ಅವರು ಸುನ್ನತಿ ಮಾಡಿಸಿಕೊಂಡಿಲ್ಲವೆಂದರೂ ಅವರು “ಸುನ್ನತಿಯವರಾಗಿದ್ದಾರೆ” – ಅಂದರೆ ಅವರೊಳಗಿರುವ ಆಂತರ್ಯದ ವಾಸ್ತವವನ್ನು ಸುನ್ನತಿಯ ಹಳೆಯ ಸಂಸ್ಕಾರವು ಸೂಚಿಸುತ್ತದೆ. ರೋಮಾ 2:29; ಕೊಲೊ 2:11 ನೋಡಿರಿ. ಪೌಲನು ಈಗ ನಿಜವಾದ ವಿಶ್ವಾಸಿಗಳನ್ನು ವ್ಯಾಖ್ಯಾನಿಸುತ್ತಾ ಇದ್ದಾನೆ.

*“ದೇವರಾತ್ಮನಿಂದ ಪ್ರೇರಿತರಾಗಿ ಆರಾಧಿಸುವದು”*– ಯೋಹಾನ 4:23,24.

*“ಕ್ರಿಸ್ತ ಯೇಸುವಿನಲ್ಲಿ ಹರ್ಷಗೊಳ್ಳುವವರು”*– ಅಥವಾ “ಕ್ರಿಸ್ತನ ಪ್ರಭಾವ” ಅಥವಾ “ಕ್ರಿಸ್ತನಲ್ಲಿ ಹೆಚ್ಚಳಪಡುವವರು” – 1 ಕೊರಿಂಥ 1:30-31.

*“ಶರೀರ ಸಂಬಂಧವಾದವುಗಳಲ್ಲಿ ಭರವಸವಿಲ್ಲದವರು”*– ದೇಹದಲ್ಲಿ ಮಾಡಿಕೊಳ್ಳುವ ಸಂಸ್ಕಾರಗಳು, ಮಾನವ ಶ್ರೇಣಿಗಳು, ಒಳ್ಳೆಯ ಕಾರ್ಯಗಳು, ಇತ್ಯಾದಿ ಮಾನವರನ್ನು ದೇವರಿಗೆ ಮೆಚ್ಚಿಕೆಯುಳ್ಳವರನ್ನಾಗಿ ಮಾಡುತ್ತವೆ ಹಾಗೂ ರಕ್ಷಣೆಯನ್ನು ಸಂಪಾದಿಸಿಕೊಳ್ಳಲು ಸಹಕರಿಸುತ್ತವೆ ಎಂದು ಸುಳ್ಳು ಬೋಧಕರು ಕಲಿಸುತ್ತಾ ಇದ್ದರು. ಪೌಲನು ಈ ಆಲೋಚನೆಯನ್ನು ಸಂಪೂರ್ಣವಾಗಿ ನಿರಾಕರಿಸಿದನು. ಮಾನವ ಸ್ವಭಾವ ಎಂಥದ್ದು ಎಂಬದನ್ನು ಅವನು ಬಲ್ಲವನಾಗಿದ್ದನು – ರೋಮಾ 7:18; 8:5-8. ನಿಜವಾದ ಕ್ರೈಸ್ತರು ಯೇಸು ಕ್ರಿಸ್ತನಲ್ಲಿ ತಮ್ಮ ಭರವಸೆಯನ್ನು ಇಡುತ್ತಾರೆಯೇ ಹೊರತು ತಮ್ಮಲ್ಲಿ ಅಥವಾ ತಾವು ಮಾಡುವ ಕೆಲಸಗಳಲ್ಲಿ ಅಥವಾ ಇತರರು ಅವರಿಗಾಗಿ ಅಥವಾ ಅವರಲ್ಲಿ ಮಾಡುವ ಕಾರ್ಯಗಳಲ್ಲಿ ಇಡುವದಿಲ್ಲ – ಗಲಾ 2:16; 5:24; ಎಫೆ 2:8-9. **4-7**

**3:4-7** ಸುಳ್ಳು ಬೋಧಕರಾಗಿದ್ದ ಕೆಲ ಯೆಹೂದ್ಯರು ತಮ್ಮಲ್ಲಿ ಮತ್ತು ತಮ್ಮ ಧರ್ಮದ

ಆಚರಣೆಯಲ್ಲಿ ಭರವಸೆಯುಳ್ಳವರಾಗಿದ್ದರು. ರೋಮಾ 2:17-20 ನೋಡಿರಿ. ಪೌಲನು ತನ್ನ ಹಿಂದಿನ ಜೀವಿತವನ್ನು ನೋಡುತ್ತಾ ತಾನು ಅವರಿಗಿಂತ ಯಾವ ವಿಷಯದಲ್ಲಿಯೂ ಕಡಿಮೆಯಿಲ್ಲ ಎಂದು ಹೇಳುತ್ತಾ ಇದ್ದಾನೆ. ಆದರೆ ಅವರಂತಲ್ಲದೆ, ತನ್ನಲ್ಲಿ ಮತ್ತು ಧರ್ಮದಲ್ಲಿ ಭರವಸೆಯಿಡುವದನ್ನು ನಿರಾಕರಿಸಬೇಕೆಂಬ ವಿಷಯವನ್ನು ಅವನು ಕಲಿತುಕೊಂಡಿದ್ದನು. ಅವನು (ಯೆಹೂದ್ಯರ ದೃಷ್ಟಿಯಲ್ಲಿ) ಆದರ್ಶನಾಗಿ ಕಾಣುವ ಏಳು ಸಂಗತಿಗಳು ತನ್ನಲ್ಲಿರುವದನ್ನು ವಿವರಿಸಿದ್ದಾನೆ. **5**

**3:5** *“ಎಂಟನೆಯ ದಿನ”*– ಯಾಜಕ 12:3.

*“ಇಸ್ರಾಯೇಲನು”*– ದೇವರಾದುಕೊಂಡ ಜನಾಂಗ (ರೋಮಾ 9:4-5).

*“ಬೆನ್ಯಾಮೀನ್”*– ಯೆಹೂದ್ಯರು ಈ ಕುಲವನ್ನು ಹೆಚ್ಚು ಮಾನ್ಯವೆಂದು ಎಣಿಸುತ್ತಾ ಇದ್ದರು. ಯೆರೂಸಲೇಮ್ ಬೆನ್ಯಾಮಿನ್ ಕುಲಕ್ಕೆ ಸೇರಿದ ಭಾಗದಲ್ಲಿ ಇತ್ತು.

*“ಇಬ್ರಿಯರಿಂದ ಹುಟ್ಟಿದ ಇಬ್ರಿಯನು”*– ಇದರ ಅರ್ಥ ಅವನು ಇಬ್ರಿಯ ಭಾಷೆಯನ್ನು ಕಲಿತುಕೊಂಡಿದ್ದನು ಮತ್ತು ಇಬ್ರಿಯ ಹಳೆಯ ಪದ್ಧತಿಗಳನ್ನು ಅಭ್ಯಾಸ ಮಾಡುತ್ತಾ ಇದ್ದನು.

*“ಫರಿಸಾಯನು”*– ಅವನು ಯೆಹೂದ್ಯರಲ್ಲಿ ಅತ್ಯಂತ ಸಂಪ್ರದಾಯಬದ್ಧ ಮತ್ತು ವಿಶೇಷವಾದ ಪಂಗಡದವನಾಗಿದ್ದನು (ಮತ್ತಾಯ 3:7 ರ ನೋಟ್ ನೋಡಿರಿ). **6**

**3:6** *“ಮತಾಸಕ್ತಿ”*– ಅವನು ಯಾವುದು ಸತ್ಯವೆಂದು ಅಂದುಕೊಂಡಿದ್ದನೋ ಅದರ ವಿಷಯದಲ್ಲಿ ಆಸಕ್ತನಾಗಿದ್ದನು ಮತ್ತು ತನ್ನ ಧರ್ಮಕ್ಕೆ ವಿರುದ್ಧವಾದ ಬೋಧನೆಯನ್ನು ದ್ವೇಷಿಸುತ್ತಾ ಇದ್ದನು (ಅಪೊ 8:3; 9:1-2). ಈ ಕಾರಣದಿಂದಲೇ ಯೆಹೂದ್ಯ ನಾಯಕರು ಅವನನ್ನು ಮಾನ್ಯನೆಂದು ಎಣಿಸುತ್ತಾ ಇದ್ದರು.

*“ನಿರ್ದೋಷಿ”*– ದೇವರು ಮೋಶೆಯ ಮೂಲಕ ನೀಡಿದ ಧರ್ಮಶಾಸ್ತ್ರವನ್ನು ಅವನು ಅಂತರ್ಯದಲ್ಲಿ ಉಲ್ಲಂಘನೆ ಮಾಡಿರಲಿಲ್ಲ (ಅವನು ಬೇರೆ ದೇವರುಗಳನ್ನು ಆರಾಧನೆ ಮಾಡುತ್ತಾ ಇರಲಿಲ್ಲ ಅಥವಾ ವಿಗ್ರಹಗಳನ್ನು ಮಾಡುತ್ತಾ ಇರಲಿಲ್ಲ ಅಥವಾ ಕದಿಯುತ್ತಾ ಇರಲಿಲ್ಲ ಅಥವಾ ವ್ಯಭಿಚಾರ ಮಾಡುತ್ತಾ ಇರಲಿಲ್ಲ ಇತ್ಯಾದಿ). ಅವನು ಬಾಹ್ಯದ ಕಾರ್ಯಗಳನ್ನು ತಪ್ಪದೆ ಮಾಡುತ್ತಾ ಇದ್ದನು. ಅವನ ನಡತೆಯಲ್ಲಿ ಯಾವುದೇ ತಪ್ಪು ಹುಡುಕಲು ಆಗುತ್ತಾ ಇರಲಿಲ್ಲ (ನಂತರದಲ್ಲಿ ತಾನು ಆಂತರಿಕವಾಗಿ ದಶಾಜ್ಞೆಗಳಲ್ಲಿ ಒಂದನ್ನು ಉಲ್ಲಂಘಿಸಿ ಅಪರಾಧಿಯಾಗಿರುವದನ್ನು ಕಲಿತುಕೊಂಡನು – ರೋಮಾ

7:7-11). ಯೆಹೂದ್ಯನಾಗಿ ಪೌಲನಂತೆ ತನ್ನ ಸ್ವಂತ ಪರಿಶ್ರಮಗಳಿಂದ ರಕ್ಷಣೆ ಹೊಂದಲು, ನೀತಿವಂತನಾಗಲು, ದೇವರಿಗೆ ಮೆಚ್ಚಿಕೆಯುಳ್ಳವನಾಗಿ ಕಾಣಿಸಿಕೊಳ್ಳಲು ಪ್ರಯತ್ನಿಸಿದವರು ಯಾರೂ ಇಲ್ಲ ಎಂಬದಾಗಿ ಹೇಳುವದೇ ಉತ್ತಮವಾಗಿದೆ. 7

**3:7** ದಮಸ್ಕದ ದಾರಿಯಲ್ಲಿ – ಅಪೊ 9:3-6 ಅವನಿಗಾದ ಅನುಭವ ಅವನಿಗೆ ಹೊಸ ದೃಷ್ಟಿಕೊನಗಳನ್ನು ನೀಡಿದವು. ಅವನಿಗೆ ಕಾರ್ಯಗಳ ನಿಜವಾದ ಬೆಲೆ ಗೊತ್ತಾಗಲು ಪ್ರಾರಂಭವಾಯಿತು. ಆತ್ಮೀಕವಾಗಿ ಯಾವುದು ಲಾಭದಾಯಕ ಎಂದು ಅವನು ಎಣಿಸುತ್ತಾ ಇದ್ದನೋ ಈಗ ಅದುವೇ ನಷ್ಟವೆಂದು ಎಣಿಸುವವನಾದನು. ಆತ್ಮವಿಶ್ವಾಸ ಮತ್ತು ಅಹಂಕಾರ ಅವನು ಯೇಸು ಕ್ರಿಸ್ತನ ಬಳಿಗೆ ಬಾರದಂತೆ ತಡೆದಿದ್ದವು. ಈ ಅವನು ಅವೆಲ್ಲವನ್ನು ತ್ಯಜಿಸಿದನು – ಜನನದ ಹೆಮ್ಮೆ, ಕುಲದ ಹೆಮ್ಮೆ, ಧರ್ಮದ ಹೆಮ್ಮೆ, ಸಾಧನೆಗಳ ಹೆಮ್ಮೆ ಎಲ್ಲವನ್ನೂ ಕಡೆಗಣಿಸಿದನು. ಅವನ ಆತ್ಮೀಕ ಕಣ್ಣುಗಳು ತರೆಯಲ್ಪಟ್ಟದ್ದರಿಂದ, ಅವನಿಗೆ ಮೆಚ್ಚಿಕೆಯಾಗಿದ್ದ ಕಾರ್ಯಗಳು ಅಪ್ರಯೋಜಕ ಮತ್ತು ವ್ಯರ್ಥವೆನಿಸಿದವು. ಸ್ವಾರ್ಥವು ಪೌಲನ ಜೀವಿತದ ಕೇಂದ್ರಬಿಂದುವಾಗಿತ್ತು. ಈಗ ಯೇಸು ಕ್ರಿಸ್ತನು ಕೇಂದ್ರಬಿಂದುವಾದನು. ನಿಜವಾಗಿಯೂ ಜ್ಞಾನೋದಯವನ್ನು ಹೊಂದುವವರು ಮತ್ತು ಯೇಸು ಕ್ರಿಸ್ತನನ್ನು ತಿಳಿದುಕೊಳ್ಳುವವರೆಲ್ಲರೂ ಈ ಅನುಭವವನ್ನು ಹೊಂದುವರು. 8

**3:8** *"ಎಲ್ಲವನ್ನು ನಷ್ಟವೆಂದೆಣಿಸುತ್ತೇನೆ"*– ಲೂಕ 14:33. ಒಂದುವೇಳೆ ಒಬ್ಬ ವ್ಯಕ್ತಿ ಎಲ್ಲಾ ಕಾರ್ಯವನ್ನು ನಷ್ಟವೆಂದೆಣಿಸಿ ಯೇಸು ಕ್ರಿಸ್ತನನ್ನು ಸಂಪಾದಿಸಿಕೊಳ್ಳುವದಾದರೆ ತಾನು ನಷ್ಟವೆಂದೆಣಿಸುವವುಗಳಿಂತ ಹೆಚ್ಚು ಲಾಭಗಳನ್ನು ಹೊಂದುವವನಾಗಿದ್ದಾನೆ ಮತ್ತು ತನ್ನ ವಿಷಯದಲ್ಲಿ ದುಃಖಪಡುವ ಕನಸನ್ನು ಅವನು ಕಾಣಬಾರದು. ಯಾಕಂದರೆ ಯೇಸು ಕ್ರಿಸ್ತನಲ್ಲಿ ಜ್ಞಾನ, ನೀತಿ, ಪರಿಶುದ್ಧತೆ, ವಿಮೋಚನೆ ಮತ್ತು ಪ್ರತಿಯೊಂದು ಆತ್ಮೀಕ ಆಶೀರ್ವಾದವು ದೊರೆಯುತ್ತದೆ – 1 ಕೊರಿಂಥ 1:30; ಎಫೆ 1:3. ನಿಜವಾದ ಕ್ರೈಸ್ತನಾಗಿರಲು ಯಾವ ಬೆಲೆಯನ್ನು ಕೊಡಬೇಕು? ಒಬ್ಬ ವ್ಯಕ್ತಿ ತನಗಿರುವದನ್ನೆಲ್ಲಾ ಬಿಡಬೇಕು. ಒಬ್ಬ ವ್ಯಕ್ತಿ ನಿಜವಾದ ಕ್ರೈಸ್ತನಾಗುವದರಿಂದ ಏನನ್ನು ಸಂಪಾದಿಸಿಕೊಳ್ಳುವನು? ದೇವರ ಹತ್ತಿರ ಇರುವವುಗಳನ್ನೆಲ್ಲಾ ಸಂಪಾದಿಸಿಕೊಳ್ಳುವನು – 1 ಕೊರಿಂಥ 3:21; ರೋಮಾ 8:17; 2 ಕೊರಿಂಥ 6:10; 8:9.

*"ಎಲ್ಲಾ ಕಾರ್ಯಗಳು"*– ಆತನು 4-6 ವಾಕ್ಯಗಳಲ್ಲಿ ಹೇಳಿರುವ ವಿಷಯಗಳು

ಮಾತ್ರವಲ್ಲ. ಅವನ ದೃಷ್ಟಿಗೆ ತನ್ನೊಂದಿಗೆ ಸಂಬಂಧಿಸಿರುವ ಎಲ್ಲವುಗಳು, ಧರ್ಮವು ಕೊಡುವ ಎಲ್ಲಾ ವಿಷಯಗಳು, ಲೋಕದಲ್ಲಿರುವ ಎಲ್ಲವೂ ನಷ್ಟವಾಗುತ್ತವೆ, ಅರ್ಥಹೀನವಾಗುತ್ತವೆ ಮತ್ತು ಬೆಲೆಯಿಲ್ಲದವುಗಳಾಗುತ್ತವೆ. ಮತ್ತಾಯ 10:39; 16:24-26 ರೊಂದಿಗೆ ಹೋಲಿಸಿ ನೋಡಿರಿ. ಯೇಸು ಕ್ರಿಸ್ತನನ್ನು ತಿಳಿದುಕೊಳ್ಳುವದೇ ಹೊಡ್ಡ ಜಯಮಾಲೆಯಾದ್ದರಿಂದ ಉಳಿದವುಗಳೆಲ್ಲಾ ಕಸವೆಂದು ಪರಿಗಣಿಸುವಂತೆ ಮಾಡಿತು. ಯೋಹಾನ 17:3; 2 ಕೊರಿಂಥ 4:6 ರೊಂದಿಗೆ ಹೋಲಿಸಿ ನೋಡಿರಿ. ಸಾಮಾನ್ಯವಾಗಿರದೆ ಯೇಸು ಕ್ರಿಸ್ತನನ್ನು ಹೆಚ್ಚಾಗಿ ತಿಳಿಯಬೇಕು ಎಂಬದು ಪೌಲನ ಮಾತಿನ ಅರ್ಥವಾಗಿದೆ. ಯೇಸು ಕ್ರಿಸ್ತನೊಂದಿಗಿನ ವೈಯಕ್ತಿಕ ನಿಕಟತೆ ಮತ್ತು ಅನ್ಯೋನ್ಯತೆಯ ಬಗ್ಗೆ ಅವನು ಮಾತನಾಡುತ್ತಾ ಇದ್ದಾನೆ. ಇದಕ್ಕಾಗಿ ಅವನು ಎಲ್ಲವನ್ನೂ ಕಸದ ಬುಟ್ಟಿಯ ಪಾಲು ಮಾಡಿದನು. ಲೋಕದಲ್ಲಿರುವ ಬಹುತೇಕ ಜನರು ಪೌಲನಿಗೆ ಕಸ ಎಂದು ಗೊತ್ತಾದ ವಿಷಯಗಳಿಗಾಗಿ ಜೀವಿಸುತ್ತಾ ಇರುವದು ದುಃಖದ ವಿಷಯವಾಗಿದೆ. **9**

**3:9** *"ಸ್ವನೀತಿ"*– ವ 6; ರೋಮಾ 10:3. ಬಹುತೇಕ ಜನರು ಈ ನೀತಿಯನ್ನೇ ಅನ್ವೇಷಿಸುವವರಾಗಿದ್ದಾರೆ. ಅವರಿಗೆ ಗೊತ್ತಿರುವದೆಲ್ಲಾ ಇದು ಮಾತ್ರವೇ ಆಗಿದೆ. ಆದರೆ ನ್ಯಾಯತೀರ್ಪಿಗಾಗಿ ಅವರು ದೇವರ ಮುಂದೆ ನಿಲ್ಲುವಾಗ ಇದು ಸಾಕಾಗುವದಿಲ್ಲ. ಲೂಕ 18:9-14; ಯೆಶಾಯ 64:6 ರೊಂದಿಗೆ ಹೋಲಿಸಿ ನೋಡಿರಿ.

*"ಕ್ರಿಸ್ತನಿಂದ ದೊರಕುವಂಥ ನೀತಿ"*– ರೋಮಾ 3:21-26,28; 5:1; 10:10; 2 ಕೊರಿಂಥ 5:21; ಗಲಾ 2:16. **10**

**3:10** *"ಆತನನ್ನು ತಿಳಿದುಕೊಂಡು"*– ವ 8. ಪೌಲನು ಯೇಸು ಕ್ರಿಸ್ತನನ್ನು ಅತ್ಯುತ್ತಮವಾಗಿ ತಿಳಿದುಕೊಳ್ಳಬೇಕೆಂದು ಬಯಸಿದನು. ಅವನು ಆತನ ಬಗ್ಗೆ ಓದಿ ತಿಳಿದುಕೊಂಡಿರುವ ಜ್ಞಾನದಿಂದ ಮಾತನಾಡದೆ ತನ್ನ ವೈಯಕ್ತಿಕ ಅನುಭವದ ಫಲಿತಾಂಶವಾಗಿರುವ ತಿಳುವಳಿಕೆಯಿಂದ ಮಾತನಾಡುತ್ತಾ ಇದ್ದಾನೆ. 2 ಪೇತ್ರ 3:18 ರೊಂದಿಗೆ ಹೋಲಿಸಿ ನೋಡಿರಿ.

*"ಆತನ ಪುನರುತ್ಥಾನದ ಶಕ್ತಿ"*– ಬಹುತೇಕ ಜನರಿಗೆ ಗೊತ್ತಿರದ (ಕೊಲೊ 1:29) ಈ ಶಕ್ತಿಯ ಬಗ್ಗೆ ಪೌಲನಿಗೆ ಹಲವು ವಿಷಯಗಳು ಗೊತ್ತಿದ್ದವು. ಆದರೂ ಅವನು ಅದನ್ನು ಹೆಚ್ಚಾಗಿ ಅನುಭವಿಸಲು ಬಯಸಿದನು. ಎಫೆ 1:19-20; 3:20; ರೋಮಾ 6:4 ರೊಂದಿಗೆ ಹೋಲಿಸಿ ನೋಡಿರಿ.

*“ಆತನ ಶ್ರಮೆಗಳಲ್ಲಿ ಪಾಲುಗಾರರಾಗುವದು”*– 1:29; ಕೊಲೊ 2:2-4; ರೋಮಾ 8:17. ಪೌಲನು ಯೇಸು ಕ್ರಿಸ್ತನಿಗಾಗಿ ಬಹಳ ಶ್ರಮೆಗಳನ್ನು ಅನುಭವಿಸಿದ್ದನು, ಸಮಾನ್ಯ ಜನರಿಗಿಂತ ಬಹಳಷ್ಟು ಅನುಭವಿಸಿದ್ದನು – 2 ಕೊರಿಂಥ 11:23-29. ಆತನು ಇದನ್ನು ಇನ್ನೂ ಹೆಚ್ಚಾಗಿ ತಿಳಿದುಕೊಳ್ಳಲು ಬಯಸಿದನು. ಆತನ ದೇಹವಾಗಿರುವ ಸಭೆಯಲ್ಲಿ ಅಂದರೆ ಯೇಸು ಕ್ರಿಸ್ತನ ಜೀವಿತದಲ್ಲಿ ಪಾಲುಗಾರರಾಗುವದೆಂದರೆ, ಆತನ ಶ್ರಮೆಗಳಲ್ಲಿಯೂ ಪಾಲುಗಾರರಾಗುವದು ಎಂಬದನ್ನು ಅವನು ತಿಳಿದುಕೊಂಡಿದ್ದನು. ಹೇಗಾದರೂ ಇದರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಬಾರದು ಎಂಬದನ್ನೂ ಅವನು ತಿಳಿದಿದ್ದನು (ಕೆಲವರು ತಪ್ಪಿಸಿಕೊಳ್ಳಬೇಕೆಂದು ಯೋಚಿಸುತ್ತಾರೆ). ಕೊಲೊ 1:24 ನೋಡಿರಿ. ಪೌಲನು ತನ್ನ ಜೀವಿತದ ಒಂದು ಕಾಲದಲ್ಲಿ ಕ್ರಿಸ್ತನಿಗೆ ಶ್ರಮೆಗಳನ್ನು ಕೊಡುತ್ತಾ ಇದ್ದನು – ಅಪೊ 9:4-5. ಯೇಸು ಕ್ರಿಸ್ತನ ಜನರು ಈ ಲೋಕದಲ್ಲಿ ಇರುವ ತನಕ ಮುಂದುವರೆಯುವ ಆತನ ಶ್ರಮೆಗಳಲ್ಲಿ ಪಾಲುಗಾರನಾಗಲು ಬಯಸುತ್ತಾ ಇದ್ದಾನೆ. ಯೇಸು ಕ್ರಿಸ್ತನ ಪುನರುತ್ಥಾನದ ಶಕ್ತಿಯಲ್ಲಿ ಪಾಲುಗಾರರಾಗುವದು ಎಂದರೆ ಆತನ ಶ್ರಮೆಗಳಲ್ಲಿಯೂ ಪಾಲುಗಾರರಾಗುವದಾಗಿದೆ. ಆತನ ಶ್ರಮೆಗಳಲ್ಲಿ ಪಾಲುಗಾರರಾಗುವದು ಎಂದರೆ ಈಗ ಆತನ ಸಂತೈಸುವಿಕೆ ಮತ್ತು ಸಮಾಧಾನದಲ್ಲಿಯೂ ಪಾಲುಗಾರರಾಗುವದಾಗಿದೆ (2 ಕೊರಿಂಥ 1:5-7; ಯೋಹಾನ 16:33) ಮತ್ತು ಇದಾದ ನಂತರ ಆತನ ಸ್ವಾಸ್ಥ್ಯದಲ್ಲಿ ಪಾಲುಗಾರರಾಗುವದಾಗಿದೆ (ರೋಮಾ 8:17).

*“ಆತನ ಮರಣದಲ್ಲಿ ಸ್ವರೂಪನಾಗುವದು”*– 2:8. ಯೇಸು ಕ್ರಿಸ್ತನ ಮರಣ ಎಂದರೆ ಸಂಪೂರ್ಣವಾದ ದೀನತೆ, ವಿಧೇಯತೆ ಮತ್ತು ದೇವರ ಚಿತ್ತಕ್ಕಾಗಿ ತನ್ನನ್ನು ನಿರಾಕರಿಸಿಕೊಳ್ಳುವದಾಗಿದೆ. ಪೌಲನು ಇದನ್ನು ತನ್ನಲ್ಲಿ ಹೆಚ್ಚೆಚ್ಚಾಗಿ ಅನುಭವಿಸಲು ಬಯಸಿದನು. 2 ಕೊರಿಂಥ 4:10-12; ಗಲಾ 2:20 ರೊಂದಿಗೆ ಹೋಲಿಸಿ ನೋಡಿರಿ. ನಮ್ಮ ಪಾಲಿಗೆ ನಾವು ಸಾಯುವಾಗ ಮಾತ್ರವೇ ನಮ್ಮೊಳಗಿರುವ ದೇವರ ಜೀವವು ಹೊರಗೆ ಬರುತ್ತದೆ. ಯೋಹಾನ 12:24-25 ನೋಡಿರಿ. 11

**3:11** *“ಸತ್ತವರಲ್ಲಿ ಪುನರುತ್ಥಾನ”*– ಇದರ ಅರ್ಥ ಕೆಲವು ಎದ್ದು ಬರುವರು, ಕೆಲವರು ಎದ್ದು ಬರುವದಿಲ್ಲ ಎಂಬದಾಗಿದೆ. ಬೇರೆ ಮಾತುಗಳಲ್ಲಿ ಹೇಳುವದಾದರೆ ಪೌಲನು ಇಲ್ಲಿ ವಿಶ್ವಾಸಿಗಳ ಪುನರುತ್ಥಾನದ ಬಗ್ಗೆ ಮಾತನಾಡುತ್ತಾ ಇದ್ದಾನೆ (1 ಕೊರಿಂಥ 15:50-54; 1

ಥೆಸ 4:14-17; ಪ್ರಕ 20:5). ಆದರೆ ಈ ಪುನರುತ್ಥಾನವನ್ನು "ಹೊಂದಬೇಕೇ"? ತನಗೆ ಪುನರುತ್ಥಾನವಾಗುತ್ತದೆಯೋ ಇಲ್ಲವೋ ಎಂಬ ಸಂದೇಹ ಪೌಲನಿಗಿತ್ತೇ? ಅವನಿಗೆ ಸಂದೇಹವಿತ್ತು ಎಂದು ಯೋಚಿಸಲು ಯಾವುದೇ ಕಾರಣವಿಲ್ಲ – 3:21; 1:6; ರೋಮಾ 5:8-9; 8:38-39; 2 ಕೊರಿಂಥ 5:1-2; 2 ತಿಮೊ 4:18. ವಿಶ್ವಾಸಿಗಳಿಗೆ ಪುನರುತ್ಥಾನವು ನಂಬಿಕೆಯ ಜೀವನದ ಕೊನೆಯಲ್ಲಿ ಆಗುತ್ತದೆ ಮತ್ತು ಯೇಸು ಕ್ರಿಸ್ತನನ್ನು ಆಯ್ಕೆ ಮಾಡಿಕೊಂಡು, ಆತನನ್ನು ಆಯ್ಕೆ ಮಾಡುವದನ್ನು ಮುಂದುವರೆಸಿ, ನಂಬಿಕೆಯಿಟ್ಟು ಕಡೆಯ ತನಕ ನಂಬಿಕೆಯಲ್ಲಿ ಮುಂದುವರೆಯುವದು ಅವಶ್ಯ ಎಂಬದನ್ನು ಅವನು ತಿಳಿದಿದ್ದನು – ಕೊಲೊ 1:23; ಇಬ್ರಿ 3:6,14. ಯೇಸು ಕ್ರಿಸ್ತನ ತಿಳುವಳಿಕೆ ಮತ್ತು ಅನ್ಯೋನ್ಯತೆಯಲ್ಲಿ ಬೆಳೆಯುವದು, ಆತನಂತೆ ಹೆಚ್ಚೆಚ್ಚಾಗಿ ಆಗುವದು, ಜೀವನದ ಮುಖ್ಯ ಗುರಿ ಎಂದು ದೃಢರಾಗಿರಬೇಕು. ನಂಬಿಕೆಯಲ್ಲಿ ಮುಂದುವರೆಯಬೇಕೆಂಬದು ಇಬ್ರಿಯ ಪತ್ರಿಕೆಯು ದೊಡ್ಡ ಧ್ಯೇಯವಾಗಿದೆ (ಇಡೀ ಸತ್ಯವೇದದ ಧ್ಯೇಯವೂ ಇದುವೇ ಆಗಿದೆ). **12**

**3:12** *"ಇನ್ನೂ ಹಿಡಿದುಕೊಂಡಿಲ್ಲ"*– ವ 10. ಯೇಸು ಕ್ರಿಸ್ತನ ಶಕ್ತಿ ಮತ್ತು ಅನ್ಯೋನ್ಯತೆಯ ಬಗ್ಗೆ ಅವನು ಕೆಲವು ವಿಷಯಗಳನ್ನು ತಿಳಿದಿದ್ದನು ಆದರೆ ಅವುಗಳನ್ನೆಲ್ಲಾ ಅನುಭವಿಸಲು ಅವನಿಗೆ ಆಗುತ್ತಾ ಇರಲಿಲ್ಲ.

*"ಸಿದ್ಧಿಗೆ ಬರುವದು"*– ಸಿದ್ಧಿಗೆ ಬರಬೇಕೆಂಬದು ಅವನ ಗುರಿಯಾಗಿತ್ತು ಆದರೆ ಇನ್ನೂ ಅನುಭವವಾಗಿರಲಿಲ್ಲ. ಮತ್ತಾಯ 5:48 ರಲ್ಲಿ ಸಿದ್ಧಿಗೆ ಬರುವದರ ನೋಟ್ ನೋಡಿರಿ. ಫಿಲಿಪ್ಪಿಯಲ್ಲಿದ್ದ ಕೆಲವರು ಈ ರೀತಿಯ ಸಿದ್ಧಿ ತಮ್ಮಲ್ಲಿದೆ ಎಂದು ಹೇಳುತ್ತಾ ಇತರರನ್ನು ಕಡೆಗಣಿಸುತ್ತಾ ಇದ್ದರು (ಪೌಲನು ತನ್ನ ಪ್ರತಿಯೊಂದು ಪತ್ರಿಕೆಯಲ್ಲಿಯೂ ತಾನು ಯಾರಿಗೆ ಪತ್ರಿಕೆಯನ್ನು ಬರೆದನೋ ಅವರ ಆತ್ಮೀಕ ವಿಷಯಗಳಿಗೆ ಬದ್ದನಾಗಿ ನಡೆದುಕೊಂಡದ್ದಾಗಿ ಹೇಳಿದ್ದಾನೆ). ಒಂದುವೇಳೆ ಹಾಗೆ ಸಿದ್ಧಿಗೆ ಬಂದವರು ಯಾರಾದರೂ ಇದ್ದರೆ, ನಾನು ಅಂಥ ಸಿದ್ಧಿಗೆ ಬಂದವನು ಎಂದು ನನ್ನ ಬಗ್ಗೆ ಹೇಳುತ್ತಿಲ್ಲ ಎಂದು ನೀವು ತಿಳಿಯಬೇಕು ಎಂಬದಾಗಿ ಪೌಲನು ಅವರಿಗೆ ಹೇಳಿದನು. ಒಂದುವೇಳೆ ಮಹಾ ಅಪೊಸ್ತಲನಾದ ಪೌಲನು ಇನ್ನೂ ಸಿದ್ಧಿಗೆ ಬಂದಿರಲಿಲ್ಲವೆಂದರೆ, ನಾವೂ ಇನ್ನು ಬಂದಿಲ್ಲ ಎಂಬ ದೃಢತೆ ನಮಗೆ ಇರಬೇಕು.

*"ಓಡುತ್ತಾ ಇದ್ದೇನೆ"*– ಇಬ್ರಿ 6:1,11,12.

*"ಹಿಡಿದುಕೊಳ್ಳಲು"*– ಯೇಸು ಕ್ರಿಸ್ತನು ಅವನನ್ನು ಕರೆದು ರಕ್ಷಿಸಿದಾಗ ಅವನು

ಏನಾಗಬೇಕೆಂದು ಬಯಸಿದನೋ ಅದನ್ನೆಲ್ಲಾ ಆಗಬೇಕೆಂದು ಅವನು ಬಯಸಿದನು. ಆತನು ಪರಿಶುದ್ಧನಾಗಲು, ದೀನನಾಗಲು, ವಿಧೇಯನಾಗಲು, ಪ್ರೀತಿಸುವವನಾಗಲು, ಫಲಕೊಡುವವನಾಗಲು ಬಯಸಿದನು. ಅವನಿಗೆ ತನ್ನ ಸದ್ಯದ ಆತ್ಮೀಕ ಪರಿಸ್ಥಿತಿಯ ವಿಷಯದಲ್ಲಿ ತೃಪ್ತಿಯಿರಲಿಲ್ಲ. ಅವನು ತನ್ನ ಜೀವಿತದಲ್ಲಿ ಹೆಚ್ಚು ಕ್ರೈಸ್ತನಂತಾಗಲು ಬಯಸಿದನು. **13**

**3:13** *"ಆದರೆ ಒಂದು"*– ಆತ್ಮೀಕ ಜೀವಿತದ ವಿಷಯದಲ್ಲಿ ಅವನ ಹೃದಯದಲ್ಲಿ ಕಳವಳವಾಗಲಿ, ಎರಡು ಮನಸ್ಸಾಗಲಿ ಇರಲಿಲ್ಲ (ಯಾಕೋಬ 1:8 ರೊಂದಿಗೆ ಹೋಲಿಸಿ ನೋಡಿರಿ).

*"ಮರೆತವನಾಗಿ"*– ಇದರ ಅರ್ಥ ಸಂಪೂರ್ಣವಾಗಿ ನೆನಪಿನಿಂದ ತೆಗೆದುಹಾಕುವದಲ್ಲ. ಅಂಥ ಕಾರ್ಯವನ್ನು ಮಾಡಲು ನಮ್ಮಿಂದ ಆಗುವದಿಲ್ಲ. ಪೌಲನ ಮಾತಿನ ಅರ್ಥವೇನೆಂದರೆ ಅವನು ಸ್ವೇಚ್ಛೆಯಿಂದ ಸತತವಾಗಿ ಹಿಂದಿನವುಗಳನ್ನು ಆಶ್ರಯಿಸಿಕೊಳ್ಳಲು ನಿರಾಕರಿಸಿದನು. ಅವನಿಗೆ ಭವಿಷ್ಯವು ಪ್ರಾಮುಖ್ಯವಾದ ಸಂಗತಿಯಾಗಿತ್ತು ಮತ್ತು ಅವನು ತನ್ನ ಹಿಂದಿನ ವಿಫಲತೆಗಳು ಹಾಗೂ ಯಶಸ್ಸುಗಳನ್ನು ಹಿಂದಕ್ಕೆ ಬಿಟ್ಟು ಮುಂದೆ ಓಡಲು ಬಯಸುವವನಾಗಿದ್ದನು. ತನ್ನ ಸೋಲುಗಳು ತನ್ನನ್ನು ನಿರಾಸೆಗೊಳಿಸುವದು ಅಥವಾ ತನ್ನ ಯಶಸ್ಸು ತನ್ನನ್ನು ತೃಪ್ತನನ್ನಾಗಿ ಮಾಡುವದು ಅವನಿಗೆ ಇಷ್ಟವಿರಲಿಲ್ಲ.

*"ಎದೆಬೊಗ್ಗಿದವನಾಗಿ"*– ಅಥವಾ "ಪ್ರಯಾಸ" – ಈ ಪದ ಅಧಿಕವಾದ ಪರಿಶ್ರಮವನ್ನು ಸೂಚಿಸುತ್ತದೆ, ಒಬ್ಬ ಓಟಗಾರನು ಓಟವನ್ನು ಗೆಲ್ಲಲು ತನ್ನೆಲ್ಲಾ ಬಲ ಉಪಯೋಗಿಸುವದನ್ನು ತಿಳಿಸುತ್ತದೆ. **14**

**3:14** *"ಗುರಿಮಾಡಿಕೊಂಡು"*– 1 ಕೊರಿಂಥ 9:24-27; ಅಪೊ 20:24 ನೋಡಿರಿ.

*"ಬಿರುದು"*– ಬಿರುದು ಏನು ಎಂದು ಅವನು ಹೇಳಿಲ್ಲ. ಅದು ಅದ್ಭುತವಾಗಿರುವದೆಂದು ಅವನಿಗೆ ಗೊತ್ತು – ಜಗತ್ತಿನ ದೇವರು ಅದನ್ನು ಪ್ರಸಿದ್ಧಪಡಿಸುವನು ಎಂಬದನ್ನು ಅವನು ತಿಳಿದಿದ್ದನು. ಬಿರುದುಗಳಿಗಾಗಿ ಮತ್ತಾಯ 5:12; 10:41-42; 16:27; 1 ಕೊರಿಂಥ 3:8,14; ಇಬ್ರಿ 10:25; ಪ್ರಕ 11:18; 22:12 ನೋಡಿರಿ.

*"ಮೇಲಕ್ಕೆ ಕರೆದು"*– ವ 20; ಇಬ್ರಿ 3:1. **15**

**3:15** *"ಪ್ರವೀಣರು"*– ಅಥವಾ "ಪರಿಪೂರ್ಣರು" – 1 ಕೊರಿಂಥ 2:6; ಎಫೆ 1:13-15; ಕೊಲೊ 1:28; 4:12; ಇಬ್ರಿ 5:14; 6:1. ಪೌಲನು ನಾನು ಪಾಪವಿಲ್ಲದವನಾಗಿದ್ದೇನೆ

ಅಥವಾ ದೋಷವಿಲ್ಲದವನಾಗಿದ್ದೇನೆ – ವ 12 ಎಂಬ ವಿಷಯದಲ್ಲಿ ಸಿದ್ಧಿಗೆ ಬಂದವನೆಂದು ತನ್ನ ಕುರಿತು ಹೇಳಿಕೊಳ್ಳಲಿಲ್ಲ. ಆದರೆ ತಾನು ಪ್ರವೀಣತೆಯುಳ್ಳ ವಿಶ್ವಾಸಿಯಾಗಿದ್ದು, ಯೇಸು ಕ್ರಿಸ್ತನಲ್ಲಿ ಆತ್ಮೀಕವಾಗಿ ಬೆಳೆಯುತ್ತಾ ಇದ್ದೇನೆ ಎಂಬದನ್ನು ಬಲ್ಲವನಾಗಿದ್ದನು. ಅಂಥ ವಿಶ್ವಾಸಿಗಳೆಲ್ಲರೂ ಆತನು ತೋರಿಸುತ್ತಿರುವ ಪರಿಪೂರ್ಣತೆಯ ಕಡೆಗೆ ದೃಷ್ಟಿ ಹಾಯಿಸಬೇಕು – ಮೇಲಿನ ವಾಕ್ಯಗಳಲ್ಲಿ ಪ್ರವೀಣತೆಯ ಬಗ್ಗೆ ತಾನು ಮಾಡುತ್ತಿರುವ ಬೋಧನೆಗಳು ದೇವರು ಕೊಟ್ಟಿರುವ ಪ್ರಕಟನೆಯಾಗಿವೆ ಎಂಬದು ಪೌಲನಿಗೆ ಗೊತ್ತಿತ್ತು, ಅವುಗಳನ್ನು ಅರ್ಥಮಾಡಿಕೊಳ್ಳಲು ದೇವರು ಅವರ ಆತ್ಮೀಕ ಕಣ್ಣುಗಳನ್ನು ತೆರೆಯಲಿ ಎಂದು ಅವನು ಪ್ರಾರ್ಥನೆ ಮಾಡುತ್ತಾ ಇದ್ದನು (1:9-10), ಇದಲ್ಲದೆ ದೇವರು ತನ್ನ ಪ್ರಾರ್ಥನೆಯನ್ನು ಕೇಳುವನು ಎಂಬ ಭರವಸೆ ಅವನಿಗಿತ್ತು. 16

**3:16** ವಿಶ್ವಾಸಿಗಳು ತಮ್ಮಲ್ಲಿರುವ ಬೆಳಕಿಗನುಸಾರ ಜೀವಿಸಬೇಕು. ಒಂದುವೇಳೆ ಅವರು ಹಾಗೆ ಜೀವಿಸಿದರೆ, ದೇವರು ಅವರಿಗೆ ಖಂಡಿತವಾಗಿಯೂ ಸತ್ಯದ ಕುರಿತು ಹೆಚ್ಚಿನ ತಿಳುವಳಿಕೆಯನ್ನು ಕೊಡುವನು. 17

**3:17** *"ಮಾದರಿ"*– ಅಪೊ 20:18 ರ ನೋಟ್ ಮತ್ತು ವಚನಗಳು ನೋಡಿರಿ. ಪೌಲನು ವಿಶ್ವಾಸಿಗಳಿಗೆ ಯಾವ ರೀತಿ ಜೀವಿಸಬೇಕು ಎಂಬದಾಗಿ ಹೇಳಿಕೊಡುವದರೊಂದಿಗೆ ತಾನೇ ಹಾಗೆ ಜೀವಿಸಿ ತೋರಿಸಿದನು.

*"ಲಕ್ಷ್ಯಕ್ಕೆ ತಂದುಕೊಳ್ಳಿರಿ"*– ವ 2; ರೋಮಾ 16:17. 18

**3:18** *"ಅಳುತ್ತಾ"*– ಅಪೊ 20:31. ನಾವು ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಟ್ಟಿದ್ದೇವೆ ಎಂದು ಹೇಳುತ್ತಿದ್ದ ಅನೇಕರು ತಮ್ಮ ನಡತೆಯ ಮೂಲಕ ತಾವು ಯೇಸು ಕ್ರಿಸ್ತನ ವಿರೋಧಿಗಳೆಂದು ತೋರಿಸುತ್ತಾ ಇದ್ದರು ಆದ್ದರಿಂದಲೇ ಪೌಲನು ಅತ್ತನು. ಸ್ಥಳೀಯ ಸಭೆ ಎಲ್ಲಿಯೇ ಪ್ರಾರಂಭವಾದರೂ ಶಿಲುಬೆಗೆ ವಿರುದ್ಧವಾಗಿ ಇಂಥ ವೈರಿಗಳು ಕೂಡಲೇ ಕಾಣಿಸಿಕೊಳ್ಳುತ್ತಾ ಇದ್ದರು ಎಂಬದಾಗಿ ಅನ್ನಿಸುತ್ತದೆ – ಅಪೊ 20:29-30; ರೋಮಾ 16:17; 2 ಕೊರಿಂಥ 11:13-15; ಗಲಾ 1:7; 6:12; ಕೊಲೊ 2:8,16; 2 ತಿಮೊ 3:1-7; 4:1-5. ಅವರಲ್ಲಿ ದೈವೀಕತೆಯ ರೂಪವಿತ್ತು ಆದರೆ ಅವರು ಅದರ ಶಕ್ತಿಯನ್ನು ಅಲ್ಲಗಳೆಯುತ್ತಾ ಇದ್ದರು – 1 ತಿಮೊ 3:5. 19

**3:19** *"ನಾಶನ"*– ಮತ್ತಾಯ 7:13; ಯೋಹಾನ 17:12; ರೋಮಾ 9:22; 2 ಥೆಸ 1:9.

*“ಹೊಟ್ಟೆ”*– ಇಲ್ಲಿ ಬಳಸಲಾಗಿರುವ ಈ ಪದ ಬಹುಶಃ “ಶರೀರವನ್ನು” ಸೂಚಿಸುತ್ತದೆ, ಆತ್ಮೀಕ ಜೀವಿತಕ್ಕೆ ವಿರುದ್ಧವಾಗಿರುವ ಜೀವಿತದ ಇಡೀ ದೇಹ (ರೋಮಾ 7:5). ಕೆಲವರು ಈ ದೇವರನ್ನು ಆರಾಧಿಸುತ್ತಾರೆ ಮತ್ತು ವಿಧೇಯರಾಗುತ್ತಾರೆ. ಅವರು ಅದಕ್ಕಾಗಿ ಸುಳ್ಳು ಹೇಳಲು, ಮೋಸ ಮಾಡಲು ಮತ್ತು ಕದ್ದುಕೊಳ್ಳಲು ಸಿದ್ಧರಾಗಿರುತ್ತಾರೆ. ನಾವು ಯೇಸು ಕ್ರಿಸ್ತನ ಹಿಂಬಾಲಕರು ಎಂದು ಅವರು ಹೇಳುತ್ತಾರೆ ಆದರೆ ತಮ್ಮ ಸ್ವಂತ ಬಯಕೆಗಳು ಮತ್ತು ಆಸೆಗಳನ್ನು ಹಿಂಬಾಲಿಸುತ್ತಾರೆ – ರೋಮಾ 16:18; 1 ತಿಮೊ 6:5; 2 ಪೇತ್ರ 2:3. ಅವರು ಹೊಟ್ಟೆತುಂಬಿದರೆ ಸಾಕು – ಆದರೆ ದೇವರಾತ್ಮನು ಪೂರ್ತಿಯಾಗಿ ಬೇಡ.

*“ನಾಚಿಕೆ”*– ಅವರು ತಮ್ಮ ಘೋರವಾದ ಆತ್ಮೀಕ ಅಮಾಯಕತನದಲ್ಲಿ ಅವರನ್ನು ನಾಚಿಕೆಗೆ ಒಳಪಡಿಸುವಂಥ ವಿಷಯಗಳ ಕುರಿತು ಹೆಚ್ಚಳಪಡುತ್ತಾರೆ. 1 ಕೊರಿಂಥ 5:1-2,6; 2 ಪೇತ್ರ 2:18; ಯೂದ 16; ಕೀರ್ತನೆ 10:3; 52:1 ರೊಂದಿಗೆ ಹೋಲಿಸಿ ನೋಡಿರಿ. ಅವರಿಗಿರುವ ಒಂದೇ ಪ್ರಭಾವವೆಂದರೆ ಪೌಲನು ತಿಳಿದಿರುವ ಪ್ರಕಾರ ಕಸವಾಗಿದೆ.

*“ಲೌಕಿಕ ಕಾರ್ಯಗಳು”*– ರೋಮಾ 8:5-8. ಆತ್ಮೀಕ ವಿಷಯಗಳು ಅವರ ಬಯಕೆಗಳಲ್ಲ (ಅವರು ಅದರ ಬಗ್ಗೆ ಎಷ್ಟೇ ಬೋಧಿಸಿದರೂ ಅಥವಾ ಕಲಿಸಿದರೂ ಅವೆಲ್ಲವೂ ವ್ಯರ್ಥ) ಬದಲಾಗಿ ಗತಿಸಿಹೋಗುವ ಈ ಲೋಕದ ಕಾರ್ಯಗಳೇ ಅವರಿಗೆ ಇಷ್ಟ (1 ಯೋಹಾನ 2:16). ಹಣ, ಆಸ್ತಿ, ಘನತೆ, ಪ್ರಖ್ಯಾತಿ, ದೇಹದ ಬಯಕೆಗಳ ತೃಪ್ತಿ – ಇವುಗಳನ್ನು ಅವರು ಪ್ರೀತಿಸುತ್ತಾರೆ ಮತ್ತು ಇವುಗಳಿಗಾಗಿ ಹಂಬಲಿಸುತ್ತಾರೆ. ಇದುವೇ ಅಗಲವಾದ ಮಾರ್ಗವಾಗಿದ್ದು ಅವರನ್ನು ನಾಶನಕ್ಕೆ ನಡೆಸುತ್ತದೆ. **20**

**3:20** ವಿಶ್ವಾಸಿಗಳು ಲೋಕದಲ್ಲಿದ್ದಾರೆ ಆದರೆ ಅವರು ಲೋಕಕ್ಕೆ ಸೇರಿದವರಲ್ಲ – ಯೋಹಾನ 17:6,11,14,15. ಅವರ ಪಟ್ಟಣ, ಅವರ ದೇಶ ಮೇಲಿದೆ – ಇಬ್ರಿ 11:10,16; 13:14; ಗಲಾ 4:26. ಅವರು ಪರಲೋಕಕ್ಕೆ ಸೇರಿದವರಾಗಿದ್ದಾರೆ. ಅವರ ನಿರೀಕ್ಷೆಗಳು, ಬಯಕೆಗಳು ಅದರ ಮೇಲೆಯೇ ಕೇಂದ್ರೀಕೃತವಾಗಿರುತ್ತದೆ. ದೇವರು ಅವರ ಅರಸನು. ಅವರು ತಮ್ಮ ರಕ್ಷಕನ ಬರೋಣವನ್ನೇ ಎದುರುನೋಡುವವರಾಗಿದ್ದಾರೆ – ಅಪೊ 1:11; 1 ಥೆಸ 4:14-18; ಇಬ್ರಿ 9:28. **21**

**3:21** *“ರೂಪಾಂತರ”*– 1 ಕೊರಿಂಥ 15:50-53.

*“ಪ್ರಭಾವವುಳ್ಳ ತನ್ನ ದೇಹ”*– 1 ಕೊರಿಂಥ 15:42-44,49; 1 ಯೋಹಾನ 3:2;

ರೋಮಾ 8:23-25.

*“ಅಧೀನಮಾಡಿಕೊಳ್ಳಲಾಗುವ”*– 1 ಕೊರಿಂಥ 15:24-25; ಇಬ್ರಿ 2:8; ಎಫೆ 1:19.

# 4[1]

**4:1** *“ಹಂಬಲ”*– 1:7-8.

*“ಸಂತೋಷವೂ ಜಯಮಾಲೆಯೂ”*– 2:16; 1 ಥೆಸ 2:19 – ಆಗ ಅವನಿಗೆ ಸಂತೋಷ, ಅದಾದ ನಂತರ ಸಂತೋಷ ಮತ್ತು ಜಯಮಾಲೆಯಾದರು.

*“ದೃಢವಾಗಿ ನಿಲ್ಲಿರಿ”*– ಎಫೆ 6:11,13,14. **2**

**4:2** ಈ ಇಬ್ಬರು ಕ್ರೈಸ್ತ ಸ್ತ್ರೀಯರು ಯಾರು ಎಂಬದು ನಮಗೆ ಗೊತ್ತಿಲ್ಲ, ಆದರೆ ಅವರ ಜಗಳ ಪೌಲನಿಗೆ ಗೊತ್ತಾಯಿತು. ಅವರ ಜಗಳವನ್ನು ಬಗೆಹರಿಸುವಂತೆ ಅವನು ಅವರನ್ನು ಬೇಡಿಕೊಂಡನು. 2:1-2 ರೊಂದಿಗೆ ಹೋಲಿಸಿ ನೋಡಿರಿ. ವಿಶ್ವಾಸಿಗಳ ನಡುವೆ ಜಗಳಗಳು ಮತ್ತು ಮನಸ್ತಾಪಗಳು ಏನು ಮಾಡಬಲ್ಲವು ಎಂಬದನ್ನು ಅವನು ಚೆನ್ನಾಗಿ ಬಲ್ಲವನಾಗಿದ್ದನು – 1 ಕೊರಿಂಥ 1:10-13; 3:3-4. **3**

**4:3** *“ನಿಜವಾದ ಜೊತೆಕೆಲಸದವರು”*– ಅವರು ಯಾರು ಎಂಬದೂ ನಮಗೆ ಗೊತ್ತಿಲ್ಲ. ಆ ಇಬ್ಬರು ಸ್ತ್ರೀಯರ ನಡುವೆ ಸಮಾಧಾನ ನೆಲೆಸುವಂತೆ ಮಾಡಲು ಖಂಡಿತವಾಗಿಯೂ ಈ ವ್ಯಕ್ತಿ ಸಹಾಯ ಮಾಡುವನೆಂದು ಪೌಲನು ನೆನೆಸಿರಬಹುದು.

*“ಜೀವಬಾಧ್ಯರ ಪಟ್ಟಿ”*– ವಿಮೋ 32:32; ಕೀರ್ತನೆ 69:28; 139:16; ಲೂಕ 10:20; ಪ್ರಕ 3:5; 20:12-15 ರೊಂದಿಗೆ ಹೋಲಿಸಿ ನೋಡಿರಿ. ಅವರ ಹೆಸರುಗಳು ಜೀವಬಾಧ್ಯರ ಪಟ್ಟಿಯಲ್ಲಿವೆ ಎಂದು ಪೌಲನಿಗೆ ಹೇಗೆ ಗೊತ್ತಾಯಿತು? ಅವರ ಕ್ರಿಯೆಗಳು ಮತ್ತು ಮಾತುಗಳನ್ನು ಗಮನಿಸುವ ಮೂಲಕ ಗೊತ್ತಾಯಿತು. 1 ಥೆಸ 1:4-10 ರೊಂದಿಗೆ ಹೋಲಿಸಿ ನೋಡಿರಿ. **4**

**- 4:4** 3:1; ನೆಹೆ 8:10 ನೋಡಿರಿ. **5**

**4:5** *“ಸೈರಣೆ”*– 2 ಕೊರಿಂಥ 10:1; 1 ತಿಮೊ 3:3; ಯಾಕೋಬ 3:17.

*“ಕರ್ತನು ಹತ್ತಿರವಾಗಿದ್ದಾನೆ”*– ಇದರ ಅರ್ಥ ಅವನು ವಿಶ್ವಾಸಿಗಳಿಗೆ ಹತ್ತಿರವಾಗಿದ್ದನು

ಎಂಬದಾಗಿದೆ (ಕೀರ್ತನೆ 145:18; ಮತ್ತಾಯ 28:20; ಇಬ್ರಿ 13:5), ಅಥವಾ ಆತನ ಎರಡನೇ ಬರೋಣವು ಹತ್ತಿರವಾಗಿದೆ ಎಂಬದಾಗಿ ಹೇಳುತ್ತಾ ಇದ್ದಾನೆ (ಯಾಕೋಬ 5:8; ಪ್ರಕ 1:3). 6

**4:6** ಜೀವನದ ಎಲ್ಲಾ ಪರಿಸ್ಥಿತಿಗಳಲ್ಲಿ ಸತತವಾಗಿ ಸಮಾಧಾನದ ಮನಸ್ಸು ಹಾಗೂ ಹೃದಯವುಳ್ಳವರಾಗಿರಲು ದೇವರು ತೋರಿರುವ ಮಾರ್ಗವನ್ನು ನೋಡಬಹುದು (ಪಾಪ ಮಾಡಿದರೆ – ಅದುವೇ ವಿಶ್ವಾಸಿಗಳ ಸಮಾಧಾನವನ್ನು ಕದ್ದುಕೊಳ್ಳುತ್ತದೆ).

*"ಚಿಂತೆ"*– ಚಿಂತೆಗಳು ದೇವರಲ್ಲಿನ ಭರವಸೆ ಅಥವಾ ಆತನ ಸತ್ಯದ ಕುರಿತಾಗಿರುವ ಬಲಹೀನತೆಯನ್ನು ವ್ಯಕ್ತಪಡಿಸುತ್ತವೆ. ಚಿಂತೆ ಮತ್ತು ನೀರು ಎಣ್ಣೆ ಮತ್ತು ನೀರಿನಂಥವುಗಳು; ಅವುಗಳು ಒಟ್ಟು ಸೇರುವದಿಲ್ಲ. ಮತ್ತಾಯ 6:25-34 ನೋಡಿರಿ.

*"ಯಾವ ಸಂಬಂಧವಾಗಿಯೂ"*– ನಾವು ಅತ್ಯಂತ ಕಷ್ಟಕರ ಮತ್ತು ಭಯಾನಕ ಪರಿಸ್ಥಿತಿಗಳಲ್ಲಿಯೂ ಚಿಂತೆ ಮಾಡಬಾರದು. ಒಂದುವೇಳೆ ನಾವು ವಿಶ್ವಾಸಿಗಳಾಗಿದ್ದರೆ, ದೇವರು ನಮ್ಮಲ್ಲಿದ್ದರೆ, ನಮ್ಮ ಹತ್ತಿರವಿದ್ದರೆ, ನಮ್ಮ ಜೊತೆ ಇದ್ದರೆ. ಆತನು ನಮ್ಮ ತಂದೆಯಾಗಿದ್ದು ಗ್ರಹಿಸಿಕೊಳ್ಳುವ ನಮ್ಮ ಸಾಮರ್ಥಕ್ಕೂ ಅಧಿಕವಾಗಿ ಆತನು ನಮ್ಮನ್ನು ಪ್ರೀತಿಸುತ್ತಾನೆ ಮತ್ತು ನಮ್ಮ ಪರವಾಗಿ ಉಪಯೋಗಿಸಲು ಆತನ ಮೇರೆಯಿಲ್ಲದ ಶಕ್ತಿಯನ್ನು ಹೊಂದಿದ್ದಾನೆ. ನಂಬಿಕೆಯಿಂದ ನಮ್ಮ ಚಿಂತೆಗಳನ್ನೆಲ್ಲಾ ಆತನಿಗೆ ಒಪ್ಪಿಸುವದು ಮತ್ತು ಆತನಲ್ಲಿ ಹಾಗೂ ಆತನ ವಾಗ್ದಾನಗಳಲ್ಲಿ ನೆಮ್ಮದಿಯಿಂದ ಇರಬೇಕಾದದ್ದು ಮಾತ್ರವೇ ನಮ್ಮ ಕರ್ತವ್ಯವಾಗಿದೆ – 1 ಪೇತ್ರ 5:8. ಪ್ರಾರ್ಥನೆಗಳಲ್ಲಿ ವಿವಿಧ ರೀತಿಗಳಿವೆ ಮತ್ತು ಅವುಗಳಲ್ಲಿ ಕೆಲವನ್ನು ಸೂಚಿಸಲು ಪೌಲನು ಇಲ್ಲಿ ನಾಲ್ಕು ವಿವಿಧ ಪದಗಳನ್ನು ಉಪಯೋಗಿಸಿದ್ದಾನೆ.

*"ಕೃತಜ್ಞತೆಯೊಡನೆ"*– ಆದಿ 18:32; ಯಾಜಕ 7:12-13; ಕೀರ್ತನೆ 7:17; 50:14-15; ಎಫೆ 6:18; 1 ಥೆಸ 5:17-18; ಇಬ್ರಿ 13:15 ನೋಟ್ಸ್ ನೋಡಿರಿ. ದೇವರಿಗೆ ಕೃತಜ್ಞತೆಯನ್ನು ಸಲ್ಲಿಸದೆ ಹೋದರೆ ಇಲ್ಲಿ ಬರೆಯಲಾಗಿರುವ ಪ್ರಾರ್ಥನೆಯ ಇತರೆ ವಿಧಾನಗಳು ಪರಿಣಾಮಕಾರಿಯಾಗಿರುವವು ಎಂದು ಊಹಿಸಿಕೊಳ್ಳಲು ನಮ್ಮಿಂದ ಸಾಧ್ಯವೇ? ಕೃತಜ್ಞತೆ ಸಲ್ಲಿಸದೆ ಇದ್ದರೆ ಹೃದಯದ ಚಿಂತೆ ಹೆಚ್ಚಾಗುವದಿಲ್ಲವೇ?

*"ದೇವರಿಗೆ ವಿಜ್ಞಾಪನೆಗಳು"*– ಜನರಿಗಲ್ಲ. ಹಾಗೆಯೇ ಮತ್ತಾಯ 7:11 ನೋಡಿರಿ. 7

**4:7** ದೇವರ ಸಮಾಧಾನ ಎಂದರೆ ಆತನು ಕೊಡುವ ಸಮಾಧಾನವಾಗಿದೆ. ಇದು ಆತನ ಸ್ವಂತ ಸಮಾಧಾನವಾಗಿದೆ. ದೇವರು ಯಾವುದರ ವಿಷಯವಾಗಿಯೂ ಚಿಂತಿಸುವದಿಲ್ಲ. ನಮ್ಮೊಳಗಿರುವ ಸಮಾಧಾನವು ದೇವರಿಗೆ ಒಪ್ಪಿಸಿಕೊಡುವದರ ಹಾಗೂ ಆತನಲ್ಲಿ ಭರವಸೆಯನ್ನಿಡುವದರ ಫಲಿತಾಂಶವಾಗಿದೆ – ಯೆಶಾಯ 26:3. ಹಾಗೆಯೇ ಯೋಹಾನ 14:1,27; 16:33; ಕೊಲೊ 3:15 ನೋಡಿರಿ. ಈ ಸಮಾಧಾನವು ಯೇಸು ಕ್ರಿಸ್ತನು ಮತ್ತಾಯ 11:28-30 ರಲ್ಲಿ ವಾಗ್ದಾನ ಮಾಡಿರುವ “ವಿಶ್ರಾಂತಿಗೆ” ಸಮಾನವಾಗಿದೆ. ಇತರರಿಗೆ ಸಮಾಧಾನ ಸಿಗದೆ ಇರುವಂಥ ಪರಿಸ್ಥಿತಿಗಳಲ್ಲಿಯೂ ವಿಶ್ವಾಸಿಗಳು ಸಮಾಧಾನದಿಂದಿರಬಹುದು, ವಿಶ್ವಾಸಿಗಳು ಹೇಗೆ ಸಮಾಧಾನದಿಂದಿದ್ದಾರೆ ಎಂಬದು ಅವರಿಗೆ ಅರ್ಥವೇ ಆಗುವದಿಲ್ಲ, ಬದಲಾಗಿ ಅವರು ಆಶ್ಚರ್ಯಚಕಿತರಾಗಿರುತ್ತಾರೆ. ದೇವರ ಈ ಸಮಾಧಾನವು ಅವರ ಮನಸ್ಸುಗಳು ಹಾಗೂ ಹೃದಯಗಳ ಬಾಗಿಲ ಬಳಿ ಕಾವಲಾಗಿರುತ್ತದೆ ಮತ್ತು ಚಿಂತೆಗಳು, ಬೇಸರಗಳು ಹಾಗೂ ತೊಂದರೆಪಡಿಸುವ ಆಲೋಚನೆಗಳು ಸಮಾಧಾನವಿಲ್ಲದವರನ್ನು ಬಾಧಿಸದಂತೆ ತಡೆಯುತ್ತವೆ. **8**

**4:8** *“ಅವೆಲ್ಲವುಗಳನ್ನು ಲಕ್ಷಕ್ಕೆ ತಂದುಕೊಳ್ಳಿರಿ”*– ನಮ್ಮ ಮನಸ್ಸು, ನಮ್ಮ ಆಲೋಚನೆಗಳು ಆತ್ಮೀಕ ಜೀವಿತದಲ್ಲಿ ಅತ್ಯಂತ ಪ್ರಾಮುಖ್ಯವಾದ ವಿಷಯಗಳಾಗಿವೆ. ಇದು ವ್ಯಾಪಕವಾಗಿ ನಮ್ಮ ಕ್ರಿಯೆಗಳನ್ನು ದೃಢಪಡಿಸುತ್ತವೆ. ವಿಶ್ವಾಸಿಗಳಿಗೆ ನೂತವಾಗಿರುವ ಮನಸ್ಸು ಇರಬೇಕು – ರೋಮಾ 12:2. ಅವರು ತಮ್ಮ ಆಲೋಚನೆಗಳನ್ನು ಪರಲೋಕದ ವಿಷಯಗಳ ಮೇಲೆ ಕೇಂದ್ರೀಕರಿಸಬೇಕು – ಕೊಲೊ 3:2. ಅವರು ತಮ್ಮ ಆಲೋಚನೆಗಳನ್ನು ದೇವರ ವಾಕ್ಯದ ಮೇಲೆ ಕೇಂದ್ರೀಕರಿಸಬೇಕು. ಕೀರ್ತನೆ 1:1-2 ನೋಡಿರಿ. ಪಾಪದ ಕಾರ್ಯಗಳು, ಲೌಕಿಕ ಕಾರ್ಯಗಳು, ದುಷ್ಟಕಾರ್ಯಗಳು ನಮ್ಮಲ್ಲಿರುವ ಪಾಪದ ಸ್ವಭಾವಕ್ಕೆ ಆಕರ್ಷಣೀಯವಾಗಿರುತ್ತವೆ – ಗಲಾ 5:16-17. ಒಂದುವೇಳೆ ನಮ್ಮ ಆಲೋಚನೆಗಳು ಅಂಥ ಕಾರ್ಯಗಳ ಮೇಲೆ ನೆಲೆಗೊಳ್ಳಲು ನಾವು ಅನುಮತಿಸುವದಾದರೆ ಆ ಬಯಕೆಗಳಿಗೆ ಒಳಗಾಗುತ್ತೇವೆ. ಒಂದುವೇಳೆ ನಮ್ಮ ಆಲೋಚನೆಗಳು ಯಾವಾಗಲೂ ಸತ್ಯವೂ, ಶುದ್ಧವೂ, ಮಾನ್ಯವೂ ಆಗಿರುವ ಕಾರ್ಯಗಳ ಮೇಲೆ ನೆಲೆಯಾಗಿದ್ದರೆ ಪಾಪದ ಕಾರ್ಯಗಳನ್ನು ನಿರಾಕರಿಸಲು ಮತ್ತು ಅವುಗಳಿಗೆ ಒಳಗಾಗದಿರಲು ನಾವು ಶಕ್ತರಾಗಿರುತ್ತೇವೆ. ಆದ್ದರಿಂದ ನಾವು ಏನನ್ನು ಓದುತ್ತೇವೆ, ಏನನ್ನು ನೋಡುತ್ತೇವೆ, ಯಾವ ರೀತಿಯ ಹಾಡುಗಳನ್ನು ಕೇಳುತ್ತೇವೆ,

ನಮ್ಮ ಊಹೆಗಳು ಯಾವ ವಿಷಯದ ಬಗ್ಗೆ ಇರುತ್ತವೆ ಎಂಬ ಸಂಗತಿಗಳಲ್ಲಿ ಹೆಚ್ಚು ಜಾಗರೂಕರಾಗಿರಬೇಕು. ಒಂದುವೇಳೆ ಯೇಸು ಕ್ರಿಸ್ತನ ವಿಶ್ವಾಸಿಗಳಾಗಿಯೂ ಅಯೋಗ್ಯವಾದ ಕಾರ್ಯಗಳಿಂದ ನಾವು ನಮ್ಮ ಮನಸ್ಸುಗಳನ್ನು ತುಂಬಿಸಿಕೊಂಡರೆ ಯೇಸು ಕ್ರಿಸ್ತನಿಗೆ ಮೆಚ್ಚಿಕೆಯಿಲ್ಲದ ಜೀವಿತಗಳನ್ನು ಜೀವಿಸುವವರಾಗುತ್ತೇವೆ. **9**

**4:9** ದೇವರು ಪೌಲನನ್ನು ವಿಶ್ವಾಸಿಗಳಿಗೆ ಮಾದರಿಯನ್ನಾಗಿ ಇರಿಸಿದನು. ನಾವು ಯಾವ ಆಲೋಚನೆ ಮಾಡಬೇಕು, ಏನನ್ನು ನಂಬಬೇಕು ಮತ್ತು ಅಭ್ಯಾಸ ಮಾಡಬೇಕು ಎಂಬದನ್ನು ಅವನಿಂದ ಕಲಿತುಕೊಳ್ಳಬೇಕು – 3:17.

*"ಸಮಾಧಾನದ ದೇವರು"*– ರೋಮಾ 15:33; 16:20; 1 ಥೆಸ 5:23; ಇಬ್ರಿ 13:20. ಸಮಾಧಾನದ ದೇವರು ನಮ್ಮ ಸಂಗಡ ಇದ್ದರೆ ಮಾತ್ರವೇ ನಾವು ದೇವರ ಸಮಾಧಾನವು ನಮ್ಮೊಂದಿಗೆ ಇರಲು ಸಾಧ್ಯ – ವ 17. **10**

**4:10** *"ಸಂತೋಷ"*– 1:4-5. ಅವನು ತನ್ನ ಕುರಿತು ಸಂತೋಷವಾಗಿರಲಿಲ್ಲ, ಯಾಕಂದರೆ ಅವನು ಬೇರೆ ಏನೋ ಪಡೆದುಕೊಂಡಿದ್ದನು. ಅವನು ಸಂತೋಷವಾಗಿದ್ದನು ಯಾಕಂದರೆ ಅದು ಅವರಿಗೆ ದೇವರಿಂದ ದೊರೆಯುವ ಬಹುಮಾನವಾಗಿತ್ತು – ವ 17. ನಮಗೆ ಕೊಡುವವರ ವಿಷಯದಲ್ಲಿ ಇದು ನಾವು ಅನುಸರಿಸಬೇಕಾದ ಅದ್ಭುತವಾದ ಮನೋಭಾವನೆಯಾಗಿದೆ. **11-12**

**4:11-12** 1 ತಿಮೊ 6:6-8; ಇಬ್ರಿ 13:5; ಲೂಕ 3:14 ನೋಡಿರಿ. ಭೂಲೋಕದಲ್ಲಿ ಹೆಚ್ಚು ಧನವಂತನು ಯಾರು? ತನಗಿರುವದರಲ್ಲಿ ತೃಪ್ತನಾಗಿರುವವನು. ಪೌಲನು "ಸಂತುಷ್ಟನಾಗಿರುವದನ್ನು" ಕಲಿತುಕೊಂಡನು, ಅದು ಅವನ ಸ್ವಭಾವದಲ್ಲಿ ಇರಲಿಲ್ಲ. ಸಂತುಷ್ಟತೆಯು ದೇವರ ಸಮಾಧಾನದೊಂದಿಗೆ ದೊರೆಯುವದಾಗಿದ್ದು ಆತನಲ್ಲಿ ಭರವಸೆಯುಳ್ಳವರ ಹೃದಯಗಳನ್ನು ಕಾಯುತ್ತದೆ. ಪೌಲನು ಯಾವ ಪರಿಸ್ಥಿತಿಗಳಲ್ಲಿ ಸಂತುಷ್ಟನಾಗಿರುವದನ್ನು ಕಲಿತುಕೊಂಡನು ಎಂಬದನ್ನು ತಿಳಿಯಲು 2 ಕೊರಿಂಥ 4:8-9; 6:4-10; 11:23-27 ನೋಡಿರಿ. ಅವನು ಈ ಪತ್ರಿಕೆಯನ್ನು ದೊಡ್ಡ ಬಂಗಲೆಯೊಳಗೆ ಕೂತು ಬರೆಯುತ್ತಿಲ್ಲ ಬದಲಾಗಿ ಸೆರೆಮನೆಯಿಂದ ಬರೆಯುತ್ತಿದ್ದಾನೆ – 1:12-13. ಹಣ, ಆಸ್ತಿ, ಸವಲತ್ತುಗಳು ಇತ್ಯಾದಿಗಳನ್ನು ಕೂಡಿಸಿಟ್ಟುಕೊಳ್ಳಬೇಕೆಂಬ ಕೆಲವು ಕ್ರೈಸ್ತರ ಬಯಕೆಗಳು ದೇವರ ವಾಕ್ಯಗಳಿಗೆ ವಿರುದ್ಧವಾಗಿದೆ ಮತ್ತು ಆತ್ಮೀಕ ಜೀವಿತಕ್ಕೆ

ಅಪಾಯಕಾರಿಯಾಗಿದೆ. **13**

**4:13** *"ಎಲ್ಲಾ ಕಾರ್ಯಗಳು"*– ಅವನು ಜೀವಿತದ ಯಾವುದೇ ರೀತಿಯ ಪರಿಸ್ಥಿತಿ, ಕಾರ್ಯ, ಕಷ್ಟಗಳನ್ನು ಎದುರಿಸಲು ಶಕ್ತನಾಗಿದ್ದನು ಮತ್ತು ಅವೆಲ್ಲವುಗಳ ಮೇಲೆ ಜಯಗಳಿಸಿದನು.

*"ಕ್ರಿಸ್ತನ ಮೂಲಕ"*– ರೋಮಾ 8:37; 2 ಕೊರಿಂಥ 2:14; 3:4-6; ಎಫೆ 1:19; 3:20. ಪೌಲನಿಗೆ ತನ್ನ ಸ್ವಂತ ಶಕ್ತಿ ಅಥವಾ ಶಮೆದಮೆ ಅಥವಾ ಕ್ರಮಶಿಕ್ಷಣದ ಮೇಲೆ ಭರವಸೆ ಇರಲಿಲ್ಲ (ಆದರೂ ಇವುಗಳನ್ನು ಅವನು ಅಭ್ಯಾಸ ಮಾಡುತ್ತಾ ಇದ್ದನು – 1 ಕೊರಿಂಥ 9:25-27).

*"ಬಲಪಡಿಸುತ್ತಾನೆ"*– ಕೀರ್ತನೆ 73:26; ಯೆಶಾಯ 40:31; 2 ಕೊರಿಂಥ 12:8,10. ಪೌಲನು ಇಲ್ಲಿ ಕಲಿತುಕೊಂಡ ವಿಷಯಗಳನ್ನು ಪ್ರತಿಯೊಬ್ಬರೂ ಕಲಿತುಕೊಳ್ಳಬೇಕು ಮತ್ತು ಯಾರೊಬ್ಬರೂ ಅವನು ಅಥವಾ ಅವಳು ಏನೂ ಮಾಡಲು ಆಗುವದಿಲ್ಲ ಎಂದು ಯೋಚಿಸಬಾರದು. **14-16**

**4:14-16** 1:5 ನೋಡಿರಿ. ಕೊಡುವ ವಿಚಾರದಲ್ಲಿ ಅವರು ಆದರ್ಶ ಸಭೆಯಾಗಿದ್ದರು. ಹಾಗೆಯೇ 2 ಕೊರಿಂಥ 8:1-5 ನೋಡಿರಿ. **16**

**4:16** *"ಥೆಸಲೊನಿಕ"*– ಅಪೊ 17:1. **17**

**4:17** ವಚನ 10. **18**

**4:18** *"ಸುಗಂಧವಾಸನೆ"*– ಯೋಹಾನ 12:3; ಮತ್ತಾಯ 26:10; ಯಾಜಕ 1:9; 2:2 ನೋಡಿರಿ.

*"ಯಜ್ಞ"*– 2:17; ಇಬ್ರಿ 13:16. **19**

**4:19** ಅವರು ಪೌಲನ ಕೊರತೆಗಳನ್ನು ನೀಗಿಸಿದ್ದರು – ವ 18. ಅವರು ತಮ್ಮ ಬಡತನದಲ್ಲಿಯೂ ಸಹಾಯ ಮಾಡುತ್ತಾ ಇದ್ದರು – 2 ಕೊರಿಂಥ 8:2. ದೇವರು ತನ್ನ ಐಶ್ವರ್ಯಕ್ಕೆ ತಕ್ಕ ಹಾಗೆ ಅವರ ಕೊರತೆಗಳನ್ನು ನೀಗಿಸುವನು. ಈ ವಿಷಯದಲ್ಲಿ ಒಂದು ತತ್ವ ಕಾರ್ಯಮಾಡುತ್ತಿದೆ ಅದನ್ನು ನಾವೆಲ್ಲರೂ ಕಲಿತುಕೊಳ್ಳಬೇಕು ಮತ್ತು ಅಭ್ಯಾಸ ಮಾಡಬೇಕು. ಲೂಕ 6:38; 2 ಕೊರಿಂಥ 9:6-8 ನೋಡಿರಿ.

*"ನಿಮ್ಮ ಪ್ರತಿಯೊಂದು ಕೊರತೆ"*– ನಮಗೆ ಬೇಕಾಗಿರುವ ಎಲ್ಲವುಗಳಲ್ಲ ಬದಲಾಗಿ ನಮಗೆ ಏನು ಬೇಕು ಎಂಬದಾಗಿ ಆತನು ನೋಡುತ್ತಾನೋ ಅವುಗಳು. ಮತ್ತಾಯ 6:33; 7:9-11;

ಕೀರ್ತನೆ 23:1; 37:25. ದೇವರು ನಮ್ಮ ಆತ್ಮೀಕ ಅವಶ್ಯಕತೆಗಳನ್ನೆಲ್ಲಾ ಒದಗಿಸುತ್ತಾನೆ – ವ 23; ಎಫೆ 1:3; 3:16-20.

*"ಐಶ್ವರ್ಯ"*– ರೋಮಾ 2:4; 9:23; ಎಫೆ 1:7,18; 2:7; 3:8,16. ತಮ್ಮ ಅವಶ್ಯಕತೆಗಳನ್ನು ಪೂರೈಸಲು ದೇವರ ಬಳಿ ಸಂಪನ್ಮೂಲಗಳು ಇಲ್ಲ ಎಂದು ವಿಶ್ವಾಸಿಗಳು ಚಿಂತಿಸಬೇಕೋ? ಖಂಡಿತವಾಗಿಯೂ ಇಲ್ಲ – ವ 6; ಮತ್ತಾಯ 9:29. ಏನಾದರೂ ಬೇಕಾದರೆ ಜನರೆದುರು ಬೇಡುವದು ಅವಶ್ಯವಾಗಿದ್ದರೆ, ವಿಶ್ವಾಸಿಗಳ ಪರವಾಗಿ ದೇವರೇ ಅದನ್ನು ಮಾಡುವನು. ಅಂದರೆ, ಕೊರತೆಯಲ್ಲಿರುವವರಿಗೆ ಸಹಾಯ ಮಾಡುವ ಸಲುವಾಗಿ ಆತನು ತನ್ನ ಜನರ ಹೃದಯಗಳನ್ನು ಪ್ರೇರೇಪಿಸುವನು. ಇಂಥ ವಿಷಯಗಳನ್ನು ಆತನ ಕರಗಳಿಗೆ ಒಪ್ಪಿಸಿ ಆತನಲ್ಲಿ ಮಾತ್ರವೇ ಭರವಸೆಯಿಡುವದನ್ನು ನಾವು ಕಲಿತುಕೊಳ್ಳಬೇಕು. ದೇವರು ಏನೂ ಮಾಡಲಾರನು ಅಥವಾ ಏನೂ ಮಾಡಲು ಆಗುವದಿಲ್ಲ ಎಂದು ನಾವು ಎಂದಿಗೂ ಊಹಿಸಬಾರದು. ಸಂಖ್ಯಾ 11:23 ನೋಡಿರಿ. **20**

**- 4:20** ರೋಮಾ 16:27. **21**

**4:21** *"ದೇವಜನರು"*– ರೋಮಾ 1:7. **22**

**4:22** *"ಕೈಸರನ ಮನೆಯವರು"*– 1:13. ಚಕ್ರವರ್ತಿಯ ಅಥವಾ ಸರ್ಕಾರಿ ಅಧಿಕಾರಿಗಳ ಸೇವೆಯಲ್ಲಿರುವವರು ಎಂಬದು ಅವನ ಮಾತಿನ ಅರ್ಥವಾಗಿರಬಹುದು. **23**

**4:23** *"ಕೃಪೆ"*– ರೋಮಾ 1:7; 16:20. ನಮ್ಮ ಕೊರತೆಗಳೆಲ್ಲವೂ ಹೀಗೆ ನೀಗುವವು.